# ಬಾಪೂಜಿ ಕೋ- ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ



# 52 ನೇ

## ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು

**Annual Report & Accounts 2020 - 2021**

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
## ದಾವಣಗೆರೆ

## ನಿರ್ದೇಶಕ ಮಂಡಲಿ

**ಅಧ್ಯಕ್ಷರು :**

**ಡಾ. ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

**ಉಪಾಧ್ಯಕ್ಷರು :**

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್** ಬಿ.ಕಾಂ.,
ಮಾಜಿ ಸಚಿವರು

**ನಿರ್ದೇಶಕರು :**

**ಶ್ರೀ ಎ. ಎಸ್. ವೀರಣ್ಣ** ಬಿ.ಕಾಂ., ಎಫ್.ಸಿ.ಎ.

**ಡಾ. ಎಂ. ಜಿ. ಈಶ್ವರಪ್ಪ** ಎಂ.ಎ., ಪಿಹೆಚ್.ಡಿ.

**ಡಾ. ಬಿ. ಎಸ್. ರೆಡ್ಡಿ** ಎಲ್‌ಎಲ್.ಎಂ., ಪಿಹೆಚ್.ಡಿ.

**ಡಾ. ಶಂಷದ್ ಬೇಗಂ** ಎಂ.ಎ., ಪಿಹೆಚ್.ಡಿ.

**ಡಾ. ಹೆಚ್. ಶಿವಪ್ಪ** ಎಂ.ಕಾಂ., ಎಲ್.ಎಲ್.ಬಿ., ಪಿಹೆಚ್.ಡಿ.

**ಡಾ|| ಪಿ. ಶಶಿಕಲಾ** ಎಂ.ಡಿ.

**ಡಾ. ಬಿ. ಪೂರ್ಣಿಮಾ** ಎಂ.ಟೆಕ್., ಪಿಹೆಚ್.ಡಿ.

**ಡಾ. ಕೆ. ಹನುಮಂತಪ್ಪ** ಎಂ.ಎ., ಪಿಹೆಚ್.ಡಿ.

**ಡಾ|| ಅರುಣ್‌ಕುಮಾರ್** ಎಂ.ಡಿ.

**ಡಾ|| ಸಿ. ವೈ. ಸುದರ್ಶನ್** ಎಂ.ಡಿ., ಡಿ.ಪಿ.ಎಂ.

**ಡಾ|| ಎಂ. ಎಂ. ಲಿಂಗರಾಜ** ಎಂ.ಡಿ.

**ಶ್ರೀ ಕೆ. ಬೊಮ್ಮಣ್ಣ** ಎಂ.ಎ.

**ಶ್ರೀ ಕೆ. ಎಸ್. ವೀರೇಶ್** ಬಿ.ಇ., ಪಿ.ಜಿ., ಡಿ.ಸಿ.ಎ.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, #120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ - 577 001.

## 52ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ. ಇದರ 2020-2021 ನೇ ಸಾಲಿನ 52ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು **ದಿನಾಂಕ 21-11-2021ನೇ ಭಾನುವಾರ ಮಧ್ಯಾಹ್ನ 12.30 ಗಂಟೆಗೆ** ವಿಡಿಯೋ ಕಾನ್ಫ್‌ರೆನ್ಸ್/ವರ್ಚ್ಯುಯಲ್ ಮುಖಾಂತರ ಕರೆಯಲಾಗಿದೆ. ಬ್ಯಾಂಕಿನ ಅಧ್ಯಕ್ಷರೂ, ಮಾಜಿ ಸಚಿವರೂ, ಶಾಸಕರೂ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ **ಡಾ. ಶಾಮನೂರು ಶಿವಶಂಕರಪ್ಪನವರು** ಸಭೆಯ ಅಧ್ಯಕ್ಷತೆ ವಹಿಸುವರು.

ಮಾನ್ಯ ಸದಸ್ಯರು ವಿಡಿಯೋ ಕಾನ್ಫ್‌ರೆನ್ಸ್/ವರ್ಚ್ಯುಯಲ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

## ಸಭೆಯ ಕಾರ್ಯಸೂಚಿ :

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. 2020-2021ನೇ ಸಾಲಿನ ಸಾಮಾನ್ಯ ಸಭೆಯ ನೋಟೀಸ್‌ನ್ನು ಕಾರ್ಯಸೂಚಿಯೊಂದಿಗೆ ಓದಿ ದಾಖಲಿಸುವುದು, ಬ್ಯಾಂಕಿನ ನಿರ್ದೇಶಕ ಮಂಡಲಿಯ ವರದಿಯನ್ನು ಓದಿ ಅಂಗೀಕರಿಸುವುದು.
4. 2020-2021ನೇ ಸಾಲಿನ ಮಾರ್ಚ್ 31ಕ್ಕೆ ಕೊನೆಗೊಂಡಿರುವ ಸನ್ನದು ಲೆಕ್ಕ ಪರಿಶೋಧಕರಿಂದ ಪರಿಶೋಧನೆಯಾದ ವಾರ್ಷಿಕ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಪರಿಶೀಲಿಸಿ, ಅಂಗೀಕರಿಸುವುದು. ನಿವ್ವಳ ಲಾಭದ ಹಂಚಿಕೆಗೆ ಮಂಜೂರಾತಿ ಕೊಡುವುದು ಮತ್ತು ಲಾಭಾಂಶವನ್ನು ಹಂಚುವ ಪ್ರಮಾಣವನ್ನು ತೀರ್ಮಾನಿಸುವುದು.
5. 2020-2021ನೇ ಸಾಲಿನಲ್ಲಿ ಮಂಜೂರಾದ ಆಯ-ವ್ಯಯದ ಅಂದಾಜಿಗಿಂತ ಹೆಚ್ಚುವರಿಯಾದ ಖರ್ಚುಗಳಿಗೆ ಅನುಮೋದನೆ ಕೊಡುವುದು.
6. 2021-2022ನೇ ಸಾಲಿನ ಆಯ-ವ್ಯಯದ ಅಂದಾಜು ಪತ್ರಿಕೆಯನ್ನು (ಬಡ್ಜೆಟ್‌ನ್ನು) ಓದಿ ಮಂಜೂರು ಮಾಡುವುದು.
7. 2021-2022ನೇ ಸಾಲಿಗೆ ನಿರ್ದೇಶಕ ಮಂಡಲಿಯವರು ರೂಪಿಸಿರುವ ಬ್ಯಾಂಕಿನ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
8. ಸನ್ನದು ಲೆಕ್ಕ ಪರಿಶೋಧಕರ 2020-2021ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸಿ ಅವರ ವರದಿಗೆ ನಿರ್ದೇಶಕ ಮಂಡಲಿಯವರು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.
9. 2021-2022 ನೇ ಸಾಲಿಗೆ ಬ್ಯಾಂಕು ಹೊರಗಿನಿಂದ ಪಡೆಯಬಹುದಾದ ಸಾಲದ ಮಿತಿಯನ್ನು ನಿಗದಿಪಡಿಸುವುದು.
10. 2021-2022ನೇ ಸಾಲಿಗೆ ಸನ್ನದು ಲೆಕ್ಕ ಪರಿಶೋಧಕರನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದಂತೆ ನೇಮಕ ಮಾಡುವುದನ್ನು ಪರಿಶೀಲಿಸುವುದು.
11. ಬ್ಯಾಂಕಿನ ಸಂಚಯಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
12. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ದಿನಾಂಕ : 30-08-2021
ದಾವಣಗೆರೆ.

**ಶಿವಶಂಕರ್ ಜಿ. ವಿ.**
ಪ್ರಧಾನ ವ್ಯವಸ್ಥಾಪಕರು

ನಿರ್ದೇಶಕ ಮಂಡಲಿಯ ಪರವಾಗಿ,
**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು.
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

**ಸೂಚನೆ :** ಸಾಮಾನ್ಯ ಸಭೆಯಲ್ಲಿ ಮೇಲ್ಕಂಡ ವಿಷಯಗಳ ವಿಚಾರವಾಗಿ ಹೆಚ್ಚಿನ ಮಾಹಿತಿಯ ಅವಶ್ಯಕತೆಯಿದ್ದಲ್ಲಿ ಸಾಮಾನ್ಯ ಸಭೆ ಜರುಗುವ ದಿನಾಂಕದ 5 ದಿವಸಗಳ ಮುಂಚಿತವಾಗಿ ಲಿಖಿತ ಮೂಲಕ ಪ್ರಧಾನ ವ್ಯವಸ್ಥಾಪಕರಿಗೆ ತಿಳಿಸಿದಲ್ಲಿ ಅಧ್ಯಕ್ಷರ ಅನುಮತಿ ಪಡೆದು ಒದಗಿಸಲು ಅವಕಾಶವಿರುತ್ತದೆ.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, #120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ - 577 001.

## 52ನೇ ಸಾಲಿನ ವಾರ್ಷಿಕ ವರದಿ 2020 - 2021

**ಆತ್ಮೀಯ ಸಹಕಾರಿ ಬಂಧುಗಳೇ,**

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ 52ನೇ ವಾರ್ಷಿಕ ಸಾಮಾನ್ಯ ಸಭೆಗೆ ಬ್ಯಾಂಕಿನ ಸದಸ್ಯರಾದ ತಮ್ಮನ್ನು ಬ್ಯಾಂಕಿನ ನಿರ್ದೇಶಕ ಮಂಡಲಿಯ ಪರವಾಗಿ ಆತ್ಮೀಯವಾಗಿ ಸ್ವಾಗತಿಸುತ್ತಿದ್ದೇನೆ.

2020-2021ನೇ ಸಾಲಿನ 52ನೇ ವರ್ಷದ ಬ್ಯಾಂಕಿನ ನಿರ್ದೇಶಕ ಮಂಡಲಿಯ ವಾರ್ಷಿಕ ಪ್ರಗತಿಯ ವರದಿ, ಸನ್ನದು ಲೆಕ್ಕಪರಿಶೋಧಕರಿಂದ ಪರಿಶೋಧನೆ ಆಗಿರುವ ಲಾಭ-ನಷ್ಟ, ಆಢಾವೆ ಪತ್ರಿಕೆ, ಪ್ರಗತಿಯ ಪಕ್ಷಿನೋಟ ಮುಂತಾದವುಗಳಿಂದ ಕೂಡಿದ ಈ ಪುಸ್ತಕವನ್ನು ಸದಸ್ಯರಿಗೆ ಅಂಚೆಯ ಮೂಲಕ ಕಳುಹಿಸಿದ್ದು ತಾವು ಅವುಗಳನ್ನು ಅವಲೋಕಿಸಿರುವಿರೆಂದು ಭಾವಿಸುತ್ತೇನೆ.

ಸದರಿ ವರ್ಷದಲ್ಲಿ ಬ್ಯಾಂಕು ಒಟ್ಟು ರೂ. 1,310.49 ಲಕ್ಷ ಲಾಭವನ್ನು ಗಳಿಸಿರುತ್ತದೆ. ಇದರಲ್ಲಿ ಈ ವರ್ಷದ ಆದಾಯ ತೆರಿಗೆ ಮತ್ತು ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ ರೂ. 597.42 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ.

ಕರ್ನಾಟಕ ರಾಜ್ಯದ ಉನ್ನತ ಮಟ್ಟದ ಕೆಲವೇ ಸಹಕಾರಿ ಪಟ್ಟಣ ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕು ಸಹ ಸ್ಥಾನವನ್ನು ಕಾಯ್ದುಕೊಂಡಿರುತ್ತದೆ. ಬ್ಯಾಂಕಿನ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ.

**ಸದಸ್ಯರು :**

2019-2020ನೇ ಸಾಲಿನಲ್ಲಿ 10,733 ಜನ ಸದಸ್ಯರಿದ್ದರು. 2020-21ನೇ ಸಾಲಿನಲ್ಲಿ 227 ಜನ ಸದಸ್ಯರು, 27 ಜನ ಸಹ ಸದಸ್ಯರು, 171 ಜನ ನಾಮಮಾತ್ರ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ. 156 ಜನ ಸದಸ್ಯರು, 30 ಜನ ಸಹ-ಸದಸ್ಯರು ಮತ್ತು 119 ಜನ ನಾಮಮಾತ್ರ ಸದಸ್ಯರು ತಮ್ಮ ಸದಸ್ಯತ್ವವನ್ನು ವಾಪಸ್ಸು ಪಡೆದಿದ್ದು, ವರ್ಷಾಂತ್ಯಕ್ಕೆ ಒಟ್ಟು 10,853 ಸದಸ್ಯರಿರುತ್ತಾರೆ.

**ಷೇರು ಬಂಡವಾಳ :**

ಈ ಸಾಲಿನಲ್ಲಿ ಷೇರು ಬಂಡವಾಳ ರೂ. 100.36 ಲಕ್ಷ ಸಂಗ್ರಹವಾಗಿದ್ದು, ರೂ. 25.10 ಲಕ್ಷ ಷೇರು ಬಂಡವಾಳ ವಾಪಸ್ಸು ಆಗಿದ್ದು, ವರ್ಷದ ಕೊನೆಗೆ ರೂ. 1,341.25 ಲಕ್ಷ ಇರುತ್ತದೆ. ಸದರಿ ಸಾಲಿನಲ್ಲಿ ಶೇಕಡಾ 5.94 ರಷ್ಟು ಹೆಚ್ಚಾಗಿದೆ.

**ಆಪದ್ಧನ ಮತ್ತು ಇತರೆ ನಿಧಿಗಳು :**

ಒಂದು ಬ್ಯಾಂಕಿನ ಆರ್ಥಿಕ ಭದ್ರತೆಯನ್ನು ಅಳೆಯಲು ಆ ಬ್ಯಾಂಕಿನ ಸ್ವಂತ ಬಂಡವಾಳ, ಕೂಡಿಟ್ಟಿರುವ ಆಪದ್ಧನ ಮತ್ತು ನಿಧಿಗಳು ಕಾರಣವಾಗಿರುತ್ತವೆ. ಬ್ಯಾಂಕಿನ ಆಪದ್ಧನ, ಕಟ್ಟಡ ನಿಧಿ, ಕರಡು ನಿಧಿ ಮುಂತಾದ ನಿಧಿಗಳು ಗಣನೀಯವಾಗಿ ಹೆಚ್ಚಳವಾಗಿರುತ್ತವೆ. ಬ್ಯಾಂಕಿನಲ್ಲಿ ಆಪದ್ಧನ ನಿಧಿ ರೂ. 5,147.28 ಲಕ್ಷ ಇದ್ದು ಮತ್ತು ಇನ್ನಿತರ ನಿಧಿಗಳ ಕೂಡಿಟ್ಟ ಮೊತ್ತ ರೂ. 5,424.23 ಲಕ್ಷ ಇರುತ್ತವೆ. ವರ್ಷದ ಕೊನೆಗೆ ಒಟ್ಟು ಮೊತ್ತ ರೂ. 10,571.51 ಲಕ್ಷ ಇರುತ್ತದೆ. ಗಳಿಸಿದ ನಿವ್ವಳ ಲಾಭದಲ್ಲಿ ಶೇಕಡಾ 40 ರಷ್ಟನ್ನು ಆಪದ್ಧನ ನಿಧಿಗೆ ವರ್ಗಾಯಿಸಿದೆ. ಈ ಸಾಲಿನಲ್ಲಿ ಶೇಕಡಾ 5.78 ರಷ್ಟು ಹೆಚ್ಚಾಗಿದೆ. ಈ ನಿಧಿಗಳು ಬ್ಯಾಂಕಿನ ಭದ್ರತೆಯ ಪ್ರತೀಕವಾಗಿವೆ.

**ದುಡಿಯುವ ಬಂಡವಾಳ :**

ಬ್ಯಾಂಕಿನ ದುಡಿಯುವ ಬಂಡವಾಳ ಈ ಸಾಲಿನಲ್ಲಿ ರೂ. 82,041.11 ಲಕ್ಷದಷ್ಟು ಇರುತ್ತದೆ. ಈ ಸಾಲಿನಲ್ಲಿ ರೂ. 1,774.60 ಲಕ್ಷದಷ್ಟು ಹೆಚ್ಚಾಗಿರುತ್ತದೆ.

## ಲಾಭ ಮತ್ತು ಲಾಭದ ವಿಂಗಡಣೆ :

2020-2021ನೇ ಸಾಲಿನಲ್ಲಿ ಬ್ಯಾಂಕಿನ ಆದಾಯ ಒಟ್ಟು ರೂ. 6,459.57 ಲಕ್ಷ ಗಳಿಸಿದ್ದು, ಖರ್ಚು ಮತ್ತು ಆದಾಯ ತೆರಿಗೆ ಅವಕಾಶಗಳಿಗೆ ಮೊಬಲಗನ್ನು ತೆಗೆದಿರಿಸಿ ರೂ. 597.47 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ. ನಿವ್ವಳ ಲಾಭವನ್ನು ಕೆಳಗಿನಂತೆ ವಿಂಗಡಿಸಲು ಆಡಳಿತ ಮಂಡಲಿಯವರು ತೀರ್ಮಾನಿಸಿ ಸಾಮಾನ್ಯ ಸಭೆಯ ಅಂಗೀಕಾರಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ. ಈ ಸಾಲಿನಲ್ಲಿ ಶೇಕಡಾ 18 ರಂತೆ ಲಾಭಾಂಶವನ್ನು ಈ ಸಭೆಯ ಅನುಮತಿ ಪಡೆದು ಷೇರುದಾರರಿಗೆ ಕೊಡಬಹುದೆಂದು ಮಹಾಸಭೆಗೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಲಾಭ ವಿಂಗಡಣೆ ವಿವರಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ವಿವರ | ಮೊಬಗಲು |
|---|---|---|
| 1 | ಮೀಸಲು ನಿಧಿ (ಆಪದ್ಧನ) ಶೇ. 40 ರಂತೆ | 2,38,96,743-00 |
| 2 | ಸಹಕಾರಿ ಶಿಕ್ಷಣ ನಿಧಿ ಶೇ. 2 ರಂತೆ | 7,16,902-00 |
| 3 | ಸಹಕಾರ ಅಭಿವೃದ್ದಿ ನಿಧಿ ಶೇ. 1 ರಂತೆ | 3,58,451-00 |
| 4 | ಕಟ್ಟಡ ನಿಧಿ | 20,00,000-00 |
| 5 | ಸಾರ್ವಜನಿಕ ಒಳಿತು ನಿಧಿ | 10,00,000-00 |
| 6 | ಸಿಬ್ಬಂದಿ ಕ್ಷೇಮ ನಿಧಿ | 10,00,000-00 |
| 7 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 10,00,000-00 |
| 8 | ಲಾಭಾಂಶ ಶೇ. 18 ರಂತೆ | 2,32,25,436-00 |
| 9 | ಗುಂತಾಯಿಸಿದ ಹಣದ ಏರಿಳಿತ ನಿಧಿ | 35,00,000-00 |
| 10 | ಸುವರ್ಣ ಮಹೋತ್ಸವ ನಿಧಿ | 30,00,000-00 |
| | ಉಳಿದ ಮೊಬಲಗು ಪುನಃ ಮೀಸಲು ನಿಧಿಗೆ | 44,326-48 |
| | ಒಟ್ಟು ರೂ. | **5,97,41,858-48** |

**ಮೇಲ್ಕಂಡಂತೆ ನಿವ್ವಳ ಲಾಭದ ವಿಂಗಡನೆಯಾದ ನಂತರ ಬ್ಯಾಂಕಿನ ನಿಧಿಗಳು ಕೆಳಗಿನಂತೆ ಇರುತ್ತವೆ.**

| ಕ್ರ.ಸಂ. | ವಿವರ | ಮೊಬಗಲು |
|---|---|---|
| 1 | ಮೀಸಲು ನಿಧಿ (ಆಪದ್ಧನ) | 53,86,69,534-07 |
| 2 | ಕಟ್ಟಡ ನಿಧಿ | 5,82,81,656-70 |
| 3 | ಲಾಭಾಂಶ ಸಮೀಕರಣ ನಿಧಿ | 1,66,45,491-55 |
| 4 | ಸಾರ್ವಜನಿಕ ಒಳಿತು ನಿಧಿ | 1,23,68,329-79 |
| 5 | ಕರಡು ಸಾಲಗಳ ನಿಧಿ | 30,93,17,569-00 |
| 6 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 1,27,43,015-27 |
| 7 | ಸಿಬ್ಬಂದಿ ಕ್ಷೇಮ ನಿಧಿ | 2,87,74,369-78 |
| 8 | ಗುಂತಾಯಿಸಿದ ಹಣದ ಸವಕಳಿ ನಿಧಿ | 3,66,05,200-00 |
| 9 | ಗುಂತಾಯಿಸಿದ ಹಣದ ಏರಿಳಿತ ನಿಧಿ | 5,14,32,000-00 |
| 10 | ಕರಡು ಸಾಲಗಳ ವಿಶೇಷ ನಿಧಿ | 1,79,54,708-00 |
| 11 | ಸುವರ್ಣ ಮಹೋತ್ಸವ ನಿಧಿ | 98,00,000-00 |
| | ಒಟ್ಟು ರೂ. | **109,25,91,874-16** |

**ಠೇವಣಿಗಳು :**

2020-2021ನೇ ಸಾಲಿಗೆ ಬ್ಯಾಂಕಿನಲ್ಲಿ ಎಲ್ಲಾ ರೀತಿಯ ಠೇವಣಿಗಳ ಒಟ್ಟು ಮೊತ್ತ ರೂ. 69,010.72 ಲಕ್ಷ ಇದೆ. ಈ ಸಾಲಿನಲ್ಲಿ ರೂ. 940.07 ಲಕ್ಷದಷ್ಟು ಹೆಚ್ಚಿಗೆ ಠೇವಣಿ ಸಂಗ್ರಹವಾಗಿದೆ. ಅಂದರೆ ಶೇಕಡಾ 1.38 ರಷ್ಟು ಹೆಚ್ಚಾಗಿದೆ. ಠೇವಣಿಗಳ ಮೇಲಿನ ಬಡ್ಡಿ ದರಗಳನ್ನು ಠೇವಣಿದಾರರಿಗೆ ಅನುಕೂಲವಾಗುವಂತೆ ಪರಿಷ್ಕೃತಗೊಳಿಸಿದೆ. ಹಿರಿಯ ನಾಗರಿಕರಿಗೆ ಶೇಕಡಾ 0.50 ರಷ್ಟು ಹೆಚ್ಚಿಗೆ ಇದೆ. ರೂ. 25 ಲಕ್ಷ ಠೇವಣಿಯನ್ನು ಒಂದೇ ಇಡಿಗಂಟಿನಲ್ಲಿ ಜಮಾಗೊಳಿಸಿದವರಿಗೆ ಶೇಕಡಾ 0.50 ಬಡ್ಡಿಯನ್ನು ಹೆಚ್ಚಿಗೆ ಕೊಡುತ್ತದೆ. ದಿನವಹಿ ಬ್ಯಾಲೆನ್ಸ್ ಮೇಲೆ ಸೇವಿಂಗ್ಸ್ ಖಾತೆಗೆ ಶೇಕಡಾ 3% ರಂತೆ ಬಡ್ಡಿ ಕೊಡುತ್ತದೆ. ಡಿಪಾಜಿಟ್ ಇನ್ಸೂರೆನ್ಸ್ ಸ್ಕೀಮ್ ನಮ್ಮ ಬ್ಯಾಂಕಿಗೂ ರೂಪಾಯಿ ಐದು ಲಕ್ಷದವರೆಗಿನ ಠೇವಣಿಗಳಿಗೆ ಅನ್ವಯಿಸುತ್ತದೆ. ಮಾನ್ಯ ಗ್ರಾಹಕರು, ಠೇವಣಿದಾರರು ಇನ್ನೂ ಹೆಚ್ಚಿನ ರೀತಿಯಲ್ಲಿ ಠೇವಣಿಗಳನ್ನು ಜಮಾ ಮಾಡಿ ಬ್ಯಾಂಕಿನ ಪ್ರಗತಿಯಲ್ಲಿ ಪಾಲ್ಗೊಳ್ಳಲು ಕೇಳಿಕೊಂಡಿದೆ.

**ಪ್ರವಾಹೀ ಧನ :**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇವರ ನಿರ್ದೇಶನದಂತೆ ಬ್ಯಾಂಕಿನಲ್ಲಿ ನಿರಂತರವಾಗಿ ಸಿ.ಆರ್.ಆರ್. (CRR) ಮತ್ತು ಎಸ್.ಎಲ್.ಆರ್. (SLR) ಬ್ಯಾಲೆನ್ಸ್‌ಗಳನ್ನು ಪ್ರತಿ ದಿನವೂ ಕಾಯ್ದುಕೊಂಡಿದೆ. ಬ್ಯಾಂಕಿನ ಸಿ.ಆರ್.ಎ.ಆರ್. (CRAR) ಪ್ರಮಾಣ ಶೇಕಡಾ 24.00%ರಷ್ಟು ಇರುತ್ತದೆ.

**ಸಾಲ ಮತ್ತು ಮುಂಗಡಗಳು :**

ಈ ಸಾಲಿನಲ್ಲಿ ಬ್ಯಾಂಕಿನ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಮತ್ತು ಸಾಲದ ಮರುಪಾವತಿಯ ಸಾಮರ್ಥ್ಯವನ್ನು ಪರಿಗಣಿಸಿ ನಿರ್ದೇಶಕ ಮಂಡಲಿಯವರು ಮತ್ತು ಸಾಲದ ಸಮಿತಿ ವಿವಿಧ ಸಾಲಗಳನ್ನು ಮಂಜೂರು ಮಾಡಿರುತ್ತಾರೆ. ದಿನಾಂಕ 31-03-2021 ರಂದು ಬ್ಯಾಂಕಿಗೆ ಬರಬೇಕಾದ ಸಾಲದ ಮೊತ್ತ ರೂ. 28,892.06 ಲಕ್ಷ ಇದೆ. ಇದು ಕಳೆದ ವರ್ಷ ರೂ. 26,887.60 ಲಕ್ಷ ಇದ್ದು ಸದರಿ ಸಾಲಿನಲ್ಲಿ ರೂ. 2,004.46 ಲಕ್ಷದಷ್ಟು ಹೆಚ್ಚಿಗೆ ಆಗಿದೆ. ಸಿ.ಡಿ. ರೇಶಿಯೋ ಶೇಕಡಾ 41.87ರಷ್ಟು ಇದೆ. ನಿಗದಿಪಡಿಸಿದ ವೇಳೆಗೆ ಸರಿಯಾಗಿ ಸಾಲದ ಕಂತನ್ನು ಬಡ್ಡಿ ಸಮೇತ ಮರುಪಾವತಿ ಮಾಡಿದಲ್ಲಿ ಬಡ್ಡಿದರದಲ್ಲಿ ರಿಯಾಯಿತಿ ಕೊಡಲಾಗುತ್ತದೆ. ಕೈಗಾರಿಕಾ ಉದ್ಯಮದಾರರಿಗೆ, ವಾಣಿಜ್ಯೋದ್ಯಮಿಗಳಿಗೆ, ಚಿಕ್ಕ ವ್ಯಾಪಾರಸ್ಥರಿಗೆ, ವಾಹನಗಳನ್ನು ಕೊಳ್ಳಲು, ಗೃಹನಿರ್ಮಾಣ ಮಾಡುವವರಿಗೆ ಅಲ್ಲದೇ ಮನೆ ರಿಪೇರಿ, ನವೀಕರಣ ಮಾಡಲು, ನಿವೇಶನ ಖರೀದಿಸಲು ಮತ್ತಿತರ ಕಾರಣಗಳಿಗೆ ಅಲ್ಪಾವಧಿ, ಮಧ್ಯಮಾವಧಿ, ಹಾಗೂ ದೀರ್ಘಾವಧಿ ಸಾಲಗಳನ್ನು ವಿತರಿಸಿದೆ. ವೇತನ ಆಧಾರಿತ ಸಾಲಗಳು ಮತ್ತು ಬಂಗಾರದ ಒಡವೆಗಳ ಮೇಲೆ ಸಹ ಸಾಲಗಳನ್ನು ಮಂಜೂರು ಮಾಡಿದೆ. ಮಾನ್ಯ ಸದಸ್ಯರು ಹೆಚ್ಚಿನ ರೀತಿಯಲ್ಲಿ ಸಾಲಗಳ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಲು ಕೋರಿದೆ.

ಈ ಸಾಲಿನಲ್ಲಿ ಆದ್ಯತಾ ವಲಯಕ್ಕೆ ಶೇಕಡಾ 56.00 ರಷ್ಟು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡಾ 12.89 ರಷ್ಟು ಸಾಲಗಳನ್ನು ಮಂಜೂರು ಮಾಡಿದೆ.

**ಸುಸ್ತಿ ಸಾಲಗಳು ಮತ್ತು ನಿಷ್ಕ್ರಿಯ ಆಸ್ತಿಗಳು :**

ಬ್ಯಾಂಕಿನಲ್ಲಿ 2021ರ ಮಾರ್ಚ್ 31ಕ್ಕೆ ಸುಸ್ತಿ ಸಾಲಗಳು ರೂ. 1,652.53 ಲಕ್ಷದಷ್ಟು ಇದೆ. ಅಂದರೆ ಒಟ್ಟು ಸಾಲಗಳ ಮೇಲೆ ಶೇಕಡಾ 5.72 ರಷ್ಟು ಇದೆ. ಮತ್ತು ನಿಷ್ಕ್ರಿಯ ಆಸ್ತಿ (ಎನ್.ಪಿ.ಎ.) ರೂ. 2,697.75 ಲಕ್ಷ ಇದೆ. ಇದು ಒಟ್ಟು ಸಾಲಗಳ ಮೇಲೆ ಶೇಕಡಾ 9.34 ರಷ್ಟು ಇದೆ. ನಿವ್ವಳ ನಿಷ್ಕ್ರಿಯ ಆಸ್ತಿ 0% ಇದೆ. ಸುಸ್ತಿ ಸಾಲದ ಖಾತೆಗಳನ್ನು ಹೊಂದಿದ ಸದಸ್ಯರು ಕೂಡಲೇ ಸಾಲ ಮತ್ತು ಬಡ್ಡಿಯನ್ನು ಬ್ಯಾಂಕಿಗೆ ಜಮಾ ಮಾಡಲು ಕೋರಿದೆ. ಇಲ್ಲವಾದಲ್ಲಿ ಅಂತಹ ಖಾತೆದಾರರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ. ಇದನ್ನು ಸುಸ್ತಿ ಸಾಲಗಾರರು ತಿಳಿದುಕೊಂಡು ತಮ್ಮ ಸಾಲಗಳನ್ನು ಮರುಪಾವತಿ ಮಾಡಲು ಹೆಚ್ಚಿನ ಆದ್ಯತೆ ಕೊಡುವಂತೆ ಕೇಳಿಕೊಳ್ಳಲಾಗಿದೆ.

**ಬ್ಯಾಂಕಿನ ಸಂಚಯಗಳು :**

ಬ್ಯಾಂಕಿನ ಸಂಚಯಗಳ ಮೊತ್ತ ರೂ. 49,299.72 ಲಕ್ಷ ಇದೆ. ರಿಸರ್ವ್ ಬ್ಯಾಂಕಿನ ಆದೇಶದಂತೆ ಸಂಚಯಗಳನ್ನು ಸರಕಾರಿ ಪತ್ರಗಳಲ್ಲಿ, ಬಾಂಡ್‌ಗಳಲ್ಲಿ, ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ, ಮ್ಯೂಚುಯಲ್ ಫಂಡ್‌ಗಳಲ್ಲಿ ಲಾಭದಾಯಕವಾಗಿ ತೊಡಗಿಸಲಾಗಿದೆ.

**ವಿವರಗಳು :**

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಮೊಬಗಲು |
|---|---|---|
| 1 | ಇತರೆ ಬ್ಯಾಂಕುಗಳಲ್ಲಿ ಖಾಯಂ ಠೇವಣಿಗಳು | 19,472.50 |
| 2 | ಸರ್ಕಾರಿ ಸೆಕ್ಯೂರಿಟಿ ಪತ್ರಗಳಲ್ಲಿ | 25,226.21 |
| 3 | ಷೇರು ಮತ್ತು ಇತರೆ ತೊಡಗಣೆಗಳು | 4,601.01 |
| | ಒಟ್ಟು ರೂ. | **49,299.72** |

**ಆಯ - ವ್ಯಯ :**

2020-2021ನೇ ಸಾಲಿನಲ್ಲಿ ಠೇವಣಿಗಳ ಮೇಲಿನ ಬಡ್ಡಿ ರೂ. 1,41,58,736.00, ಆದಾಯ ತೆರಿಗೆ ರೂ. 64,30,233-00 ಮಂಜೂರಾದ ಬಡ್ಜೆಟ್‌ಗಿಂತ ಹೆಚ್ಚಾಗಿರುತ್ತದೆ. ಇವುಗಳ ಮಂಜೂರಾತಿಗಾಗಿ ಕೋರಿದೆ. 2021-2022ನೇ ಸಾಲಿನ ಆಯ-ವ್ಯಯ ಮಂಜೂರಾತಿ ಪತ್ರಿಕೆಯನ್ನು ತಮ್ಮ ಮಂಜೂರಾತಿಗಾಗಿ ಮಂಡಿಸಿದೆ.

**2021-2022ನೇ ಸಾಲಿಗೆ ಉದ್ದೇಶಿತ ಕಾರ್ಯಚಟುವಟಿಕೆಗಳು :**

1. ಠೇವಣಿ ಸಂಗ್ರಹಣೆಯನ್ನು ಹೆಚ್ಚಿಸುವುದು ಮತ್ತು ಸದಸ್ಯರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡಿ ಹೆಚ್ಚಿನ ಪ್ರಗತಿಯನ್ನು ಕಾಯ್ದು ಕೊಳ್ಳುವುದು.
2. ಕಟ್‌ಬಾಕಿಗಳನ್ನು ವಸೂಲು ಮಾಡಿ ಬ್ಯಾಂಕಿನ ಎನ್.ಪಿ.ಎ. ಸಾಲಗಳನ್ನು ಕಡಿಮೆ ಮಾಡುವುದು.
3. ಅವಶ್ಯವಿದ್ದ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ಮತ್ತು ಹೊಸ ಎ.ಟಿ.ಎಂ.ಗಳನ್ನು ಸ್ಥಾಪಿಸುವುದು.

**ಲೆಕ್ಕ ಪರಿಶೋಧನೆ :**

2020-2021ನೇ ಸಾಲಿನ ವಾರ್ಷಿಕ ಬ್ಯಾಂಕಿನ ಲೆಕ್ಕ ಪತ್ರಗಳ ಪರಿಶೋಧನೆಯು ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಎಸ್. ಎಸ್. ಹುರಕಡ್ಲಿ, ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ ಇವರಿಂದ ಪರಿಶೋಧನೆಯಾಗಿ ವರದಿಯನ್ನು ಕೊಟ್ಟಿರುತ್ತಾರೆ. ಅವರ ವರದಿಗೆ ಅನುಪಾಲನಾ ವರದಿಯನ್ನು ಅನುಮೋದಿಸಿ ತಮ್ಮ ಅಂಗೀಕಾರಕ್ಕಾಗಿ ಈ ಸಭೆಯಲ್ಲಿ ಮಂಡಿಸಿದೆ.

ಸಮವರ್ತಿ ಲೆಕ್ಕಪರಿಶೋಧನೆಯನ್ನು ಮೆ॥ ಶಾಂತಪ್ಪ ಅಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ ಇವರು ಕೈಗೊಂಡು ತ್ರೈಮಾಸಿಕ ವರದಿಗಳನ್ನು ಕೊಟ್ಟಿರುತ್ತಾರೆ. ಐ.ಎಸ್./ಇ.ಡಿ.ಪಿ. ಆಡಿಟ್‌ನ್ನು ಮೆ॥ ವಿ. ಆರ್. ತಿಟೆ ಅಂಡ್ ಕೋ, ಹುಬ್ಬಳ್ಳಿ ಇವರಿಂದ ಆಗಿರುತ್ತದೆ.

ದಿನಾಂಕ 01-04-2019 ರಿಂದ 31-03-2020ರ ವರೆಗೆ ಬ್ಯಾಂಕಿನ ಲೆಕ್ಕಪತ್ರಗಳನ್ನು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್‌ರಾದ ಶ್ರೀ ಆನಂದಕುಮಾರ್ ಮೆಹೊತ್ರಾ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಇವರಿಂದ ಪರಿವೀಕ್ಷಣೆಯಾಗಿದೆ.

ಬ್ಯಾಂಕು ಈ ಸಾಲಿನಲ್ಲಿಯೂ "ಎ" ವರ್ಗದ ಆಡಿಟ್ ಶ್ರೇಣಿಯಲ್ಲಿ ಮುಂದುವರೆದಿದೆ.

ಬ್ಯಾಂಕಿನ ಪ್ರಗತಿಗೆ ಸತತವಾಗಿ ಶ್ರಮಿಸುತ್ತಿರುವ ಬ್ಯಾಂಕ್ ಸಿಬ್ಬಂದಿಯವರಿಗೆ ವಿವಿಧ ಉದ್ದೇಶಕ್ಕಾಗಿ ಸಾಲಗಳು ಮತ್ತು ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಸಿಬ್ಬಂದಿಯವರನ್ನು ತರಬೇತಿ ಪಡೆಯಲು ತರಬೇತಿ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ.

ಸಾರ್ವಜನಿಕ ಒಳಿತು ನಿಧಿಯಿಂದ ಬ್ಯಾಂಕಿನ ಸದಸ್ಯರು ಮೃತರಾದಲ್ಲಿ ಅವರ ವಾರಸುದಾರರಿಗೆ ರೂ. 10,000/-ರಂತೆ ಧನ ಸಹಾಯವನ್ನು ವಿತರಿಸಿದೆ.

ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸಲು ಬ್ಯಾಂಕಿನ ಎಲ್ಲಾ ಶಾಖೆಗಳಿಗೂ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಹಾಗೂ ಸಿ.ಟಿ.ಎಸ್. 2010 ಕ್ಲಿಯರಿಂಗ್‌ಗೆ ಐ.ಡಿ.ಬಿ.ಐ. ಬ್ಯಾಂಕಿನ ಪ್ರಾಯೋಜಕತ್ವ (Sponsor Bank) ದ ಉಪಸದಸ್ಯತ್ವ (Sub Membership) ವನ್ನು ಪಡೆದಿರುತ್ತದೆ. ಇದರಿಂದ ಐ.ಡಿ.ಬಿ.ಐ. ಬ್ಯಾಂಕಿನೊಂದಿಗೆ ಒಡಂಬಡಿಕೆ ಮಾಡಿಕೊಂಡು

ಪ್ರಾರಂಭಿಸಿದ್ದೇವೆ. ನಮ್ಮ ಬ್ಯಾಂಕಿನ ರೂಪೇ ಕಾರ್ಡ್‌ನಿಂದ (Rupay Debit Card) ಗ್ರಾಹಕರು ದೇಶದ ಎಲ್ಲಾ ಬ್ಯಾಂಕಿನ ಎ.ಟಿ.ಎಂ. ಕೇಂದ್ರಗಳಲ್ಲಿ ಹಣವನ್ನು ಪಡೆಯಬಹುದು ಮತ್ತು ಪಾಯಿಂಟ್ ಆಫ್ ಸೇಲ್ (Point of Sale) ಮುಖಾಂತರ ವ್ಯವಹರಿಸಬಹುದು ಹಾಗೂ ಆರ್.ಟಿ.ಜಿ.ಎಸ್./ನೆಫ್ಟ್ (RTGS/NEFT) ಸೌಲಭ್ಯವನ್ನು ನಮ್ಮ ಬ್ಯಾಂಕಿನ ಸ್ವಂತ IFSC ಕೋಡ್ ನಂ. IBKL0364BCB ಮುಖಾಂತರ ಗ್ರಾಹಕರು ನೇರವಾಗಿ ತಮ್ಮ ಖಾತೆಗಳಿಗೆ ಹಣ ವರ್ಗಾವಣೆ ಸೌಲಭ್ಯಗಳನ್ನು ಪಡೆಯಬಹುದು.

ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಹೆಚ್ಚು ಸ್ವಂತ ಬಂಡವಾಳ ಹೊಂದಿರುವ ಬ್ಯಾಂಕ್ ಆಗಿದ್ದು, ಈ ಸಾಧನೆಗೆ ಬ್ಯಾಂಕಿನ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ ಡಾ. ಶಾಮನೂರು ಶಿವಶಂಕರಪ್ಪನವರ ಪರಿಶ್ರಮ, ದೂರದೃಷ್ಟಿ ಮತ್ತು ಅಚಲ ವಿಶ್ವಾಸದಿಂದ ಕೂಡಿದ ಅವರು ಈ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಶ್ರೀಯುತರು ಹೃದಯ ಶ್ರೀಮಂತಿಕೆಯ ವ್ಯಕ್ತಿತ್ವದವರು, ಶಿಕ್ಷಣ ಪ್ರೇಮಿಗಳು, ಜನಪ್ರಿಯ ಶಾಸಕರು, ಸಮರ್ಥ ಆಡಳಿತಗಾರರು, ಚತುರ ವಾಣಿಜ್ಯೋದ್ಯಮಿಗಳು, ಸುಪ್ರಸಿದ್ಧ ಕೈಗಾರಿಕೋದ್ಯಮಿಗಳು, ಮುತ್ಸದ್ದಿ ರಾಜಕಾರಣಿಗಳು, ಧರ್ಮಚೂಡಾಮಣಿ, ಅಜಾತಶತ್ರು, ನಗರದ ಶಿಕ್ಷಣ ನಿರ್ಮಾತೃ, ಕೊಡುಗೈ ದಾನಿಗಳು, ಶತಮಾನದ ಶ್ರೇಷ್ಠರು, ಬಡವರ ಬಂಧು, ನಿತ್ಯ ಸೇವಾಯಜ್ಞಧಾರಿ, ಸರ್ವಸಮಾಜಗಳ ರಕ್ಷಕರು, ಸೃಜನಶೀಲರು, ಅಮೃತಪುರುಷ, ಕ್ರಿಯಾಶೀಲ, ಕ್ರೀಡಾ ಪ್ರೇಮಿಗಳು, ವಿದ್ಯಾಸೇವಾ ಸಾಗರ, ಜನಸೇವಕ ಮುಂತಾದ ಹೆಸರಿನಿಂದ ಕರೆಸಿಕೊಳ್ಳುವವರಾಗಿದ್ದು, ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಅವರು ಬ್ಯಾಂಕಿನ ಪ್ರಗತಿಗೋಸ್ಕರ ನಿರಂತರ ಚಿಂತನೆವುಳ್ಳವರಾಗಿದ್ದು, ಶ್ರೀಯುತರ ಅಮೂಲ್ಯ ಸೇವೆಯನ್ನು ಬ್ಯಾಂಕು ಪ್ರಾರಂಭದಿಂದಲೂ ಅವ್ಯಾಹತವಾಗಿ ಪಡೆಯುತ್ತಾ ಬಂದಿದೆ. ಶ್ರೀಯುತರು ಕರ್ನಾಟಕ ರಾಜ್ಯದ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಕಾರ್ಯನಿರ್ವಹಿಸಿರುವುದು ನಮ್ಮ ಬ್ಯಾಂಕಿಗೆ ಹೆಮ್ಮೆಯ ವಿಷಯವಾಗಿದೆ.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಯುತ ಎಸ್. ಎಸ್. ಮಲ್ಲಿಕಾರ್ಜುನ್‌ರವರು ಬ್ಯಾಂಕಿನ ಅಭಿವೃದ್ಧಿಗಾಗಿ ವಿಶೇಷ ಆಸಕ್ತಿವುಳ್ಳವ ರಾಗಿದ್ದಾರೆ. ಬ್ಯಾಂಕಿನ ನಿರ್ದೇಶಕರುಗಳು ಬ್ಯಾಂಕಿನ ಸಾಧನೆಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ್ದು ಎಲ್ಲಾ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯೊಂದಿಗೆ ಭಾಗವಹಿಸುತ್ತಿದ್ದಾರೆ. ಬ್ಯಾಂಕಿನ ಸಿಬ್ಬಂದಿಯವರ ಸೇವೆ ಸಹ ಉನ್ನತ ಮಟ್ಟದ್ದಾಗಿದೆ.

## ಕೃತಜ್ಞತೆಗಳು :

ಬಾಪೂಜಿ ವಿದ್ಯಾಸಂಸ್ಥೆಯವರು ತಮ್ಮ ಎಲ್ಲಾ ಠೇವಣಿಗಳನ್ನು ನಮ್ಮ ಬ್ಯಾಂಕಿನಲ್ಲಿ ತೊಡಗಿಸಿದ್ದಾರೆ. ಸಂಸ್ಥೆಯ ಎಲ್ಲಾ ಆರ್ಥಿಕ ವ್ಯವಹಾರಗಳು ನಮ್ಮ ಬ್ಯಾಂಕಿನ ಮುಖಾಂತರವೇ ನಡೆಯುತ್ತವೆ. ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಿಗೂ, ಅಧ್ಯಕ್ಷರಿಗೂ ಹಾಗೂ ಎಲ್ಲಾ ಪದಾಧಿಕಾರಿಗಳಿಗೂ ನಾವು ಅಭಿಮಾನ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇವೆ.

ಉಪಯುಕ್ತ ಸಲಹೆ, ಸೂಚನೆಗಳನ್ನು ಕಾಲಕಾಲಕ್ಕೆ ಸರಿಯಾಗಿ ಸಮಯೋಚಿತವಾಗಿ ಕೊಡುತ್ತಿರುವ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೂ, ಸಹಕಾರಿ ಸಂಘಗಳ ಇಲಾಖೆ ಮತ್ತು ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳಿಗೂ, ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳ ಒಕ್ಕೂಟ, ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ, ರಾಜ್ಯ ಸಹಕಾರಿ ಮಹಾಮಂಡಳ, ಆದಾಯ ತೆರಿಗೆಯ ಅಧಿಕಾರಿಗಳಿಗೂ ಮತ್ತು ಇತರೆ ಕಛೇರಿಗಳ ಅಧಿಕಾರಿ ವರ್ಗದವರಿಗೂ ಬ್ಯಾಂಕು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬ್ಯಾಂಕಿನ ಠೇವಣಿದಾರರಿಗೂ, ಸದಸ್ಯರಿಗೂ, ಗ್ರಾಹಕರಿಗೂ, ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಬ್ಯಾಂಕಿನಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಿರ್ದೇಶಕ ಮಂಡಲಿಯ ಪರವಾಗಿ,

**ಡಾ. ಶಾಮನೂರು ಶಿವಶಂಕರಪ್ಪ**

ಅಧ್ಯಕ್ಷರು

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

## ಬಾಪೂಜಿ ಕೋ-ಆಪರೇಟಿವ್

## ದಿನಾಂಕ 31-03-2021ರ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 12,65,98,950.00 | **ಷೇರು ಬಂಡವಾಳ** | | 13,41,24,675.00 |
| 12,65,98,950.00 | ಪಾವತಿಯಾದ ಷೇರು ಬಂಡವಾಳ | 13,41,24,675.00 | |
| 12,65,98,950.00 | ವ್ಯಕ್ತಿ ಮತ್ತು ಸಂಸ್ಥೆಗಳಿಂದ | 13,41,24,675.00 | |
| 99,93,94,243.20 | **ಆಪದ್ಧನ ಮತ್ತು ಇತರೆ ನಿಧಿಗಳು** | | 105,71,50,804.68 |
| 48,35,67,741.11 | ಮೀಸಲು ನಿಧಿ (ಆಪದ್ಧನ ನಿಧಿ) | 51,47,28,464.59 | |
| 5,57,81,656.70 | ಕಟ್ಟಡದ ನಿಧಿ | 5,62,81,656.70 | |
| 1,66,45,491.55 | ಲಾಭಾಂಶ ಸಮೀಕರಣ ನಿಧಿ | 1,66,45,491.55 | |
| 1,15,38,329.79 | ಸಾರ್ವಜನಿಕ ಒಳಿತು ನಿಧಿ | 1,13,68,329.79 | |
| 30,31,43,351.00 | ಕರಡು ಸಾಲಗಳ ನಿಧಿ | 30,93,17,569.00 | |
| 87,43,015.27 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 1,27,43,015.27 | |
| 2,72,74,369.78 | ಸಿಬ್ಬಂದಿ ಕ್ಷೇಮ ನಿಧಿ | 2,77,74,369.78 | |
| 3,51,05,200.00 | ಗುಂತಾಯಿಸಿದ ಹಣದ ಸವಕಳಿ ನಿಧಿ | 3,56,05,200.00 | |
| 3,69,32,000.00 | ಗುಂತಾಯಿಸಿದ ಹಣದ ಏರಿಳಿತ ನಿಧಿ | 4,79,32,000.00 | |
| 1,49,63,088.00 | ಕರಡು ಸಾಲಗಳ ವಿಶೇಷ ನಿಧಿ | 1,79,54,708.00 | |
| 57,00,000.00 | ಸುವರ್ಣ ಮಹೋತ್ಸವ ನಿಧಿ | 68,00,000.00 | |
| 680,70,64,717.06 | **ಠೇವಣಿಗಳು ಮತ್ತು ಇತರೆ ಖಾತೆಗಳು** | | 690,10,72,243.18 |
| 429,60,11,807.72 | ಮುದ್ದತಿ ಠೇವಣಿಗಳು | 481,57,11,616.17 | |
| 429,36,52,807.72 | ವ್ಯಕ್ತಿಗಳಿಂದ | 481,12,37,956.17 | |
| 23,59,000.00 | ಸೊಸೈಟಿಗಳಿಂದ | 44,73,660.00 | |
| **793,30,57,910.26** | **ಮುಂದುವರೆದಿದೆ** | | **809,23,47,722.86** |

BAPUJI CO-OPERATIVE BANK LTD DAVANGERE BCB LTD

# ಬ್ಯಾಂಕ್ ಲಿ., ದಾವಣಗೆರೆ

## ಆಢಾವೆ ಪತ್ರಿಕೆ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 36,71,01,788.75 | **ನಗದು ಶಿಲ್ಕು** | | 88,31,00,364.75 |
| 7,75,17,539.00 | ಕೈಯಲ್ಲಿ ಶಿಲ್ಕು | 7,31,97,352.00 | |
| 6,95,84,249.75 | ರಿಸರ್ವ್ ಬ್ಯಾಂಕ್/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ/ರಾಜ್ಯ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ | 79,03,012.75 | |
| 22,00,00,000.00 | ಖಾಯಂ ಠೇವಣಿಗಳಲ್ಲಿ | 80,20,00,000.00 | |
| 170,55,70,529.40 | **ಶಿಲ್ಕು ಇತರೆ ಬ್ಯಾಂಕುಗಳಲ್ಲಿ** | | 136,45,62,311.65 |
| 21,88,20,529.40 | ಚಾಲ್ತಿ ಖಾತೆಗಳಲ್ಲಿ | 21,93,12,811.65 | |
| 89,67,50,000.00 | ಖಾಯಂ ಠೇವಣಿಗಳಲ್ಲಿ | 114,52,49,500.00 | |
| 59,00,00,000.00 | **ಮನಿ ಅಟ್ ಕಾಲ್ ಅಂಡ್ ಶಾರ್ಟ್ ನೋಟೀಸ್** | -- | |
| 316,30,70,876.56 | **ಸಂಚಯಗಳು** | | 298,27,22,413.11 |
| 292,19,69,776.56 | ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ | 252,26,21,313.11 | |
| 292,19,69,776.56 | ಪುಸ್ತಕ ಮೌಲ್ಯ | 252,26,21,313.11 | |
| 291,52,60,000.00 | ಮುಖ ಬೆಲೆ | 251,52,60,000.00 | |
| 298,51,17,178.82 | ಮಾರುಕಟ್ಟೆ ಬೆಲೆ | 251,12,84,234.43 | |
| 24,10,00,000.00 | ಮತ್ತಿತರೆ ಭದ್ರತೆಗಳಲ್ಲಿ | 46,00,00,000.00 | |
| 1,01,100.00 | ಸಹಕಾರಿ ಸಂಘಗಳ ಷೇರುಗಳಲ್ಲಿ | 1,01,100.00 | |
| **523,57,43,194.71** | **ಮುಂದುವರೆದಿದೆ** | | **523,03,85,089.51** |

BAPUJI CO-OPERATIVE BANK LIMITED BCB LTD DAVANGERE

## ಬಾಪೂಜಿ ಕೋ-ಆಪರೇಟಿವ್

## ದಿನಾಂಕ 31-03-2021ರ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 793,30,57,910.26 | ಹಿಂದಿನಿಂದ ಬಂದದ್ದು | | 809,23,47,722.86 |
| 224,77,47,291.03 | ಉಳಿತಾಯ ಠೇವಣಿಗಳು | 178,59,34,103.42 | |
| 224,73,13,384.43 | ವ್ಯಕ್ತಿಗಳಿಂದ | 178,53,98,887.35 | |
| 4,33,906.60 | ಸೊಸೈಟಿಗಳಿಂದ | 5,35,216.07 | |
| 26,33,05,618.31 | ಚಾಲ್ತಿ ಠೇವಣಿಗಳು | 29,94,26,523.59 | |
| 25,41,47,663.22 | ವ್ಯಕ್ತಿಗಳಿಂದ | 29,05,77,529.04 | |
| 91,57,955.09 | ಸೊಸೈಟಿಗಳಿಂದ | 88,48,994.55 | |
| | ಸಾಲಗಳು | | |
| | ರಿಸರ್ವ್ ಬ್ಯಾಂಕ್, ರಾಜ್ಯ ಮತ್ತು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕ್‌ಗಳಿಂದ | | |
| 28,04,274.00 | ಕೊಡಬೇಕಾಗಿರುವ ಬಡ್ಡಿ (ಠೇವಣಿಗಳ ಮೇಲೆ) | | 23,95,915.00 |
| 19,71,27,415.30 | ಕಟ್ ಬಾಕಿ ಬಡ್ಡಿ ಮೀಸಲು ಸಾಲಗಳ ಮೇಲೆ (ಎದುರುತೋರಿಸಿದಂತೆ) | | 22,93,96,168.82 |
| 3,45,83,546.74 | ಇತರೆ ಹೊಣೆಗಾರಿಕೆಗಳು | | 3,87,02,273.14 |
| 27,67,035.00 | ಲಾಭಾಂಶ ಕೊಡಬೇಕಾಗಿರುವುದು | 13,13,970.00 | |
| 30,89,016.67 | ಕೊಡಬೇಕಾದ ಡಿಮ್ಯಾಂಡ್ ಡ್ರಾಫ್ಟ್‌ಗಳು | 29,75,522.67 | |
| 96,64,560.07 | ಕೊಡಬೇಕಾದ ಪೇ ಆರ್ಡರ್‌ಗಳು | 1,52,38,938.47 | |
| 7,68,053.00 | ಅಮಾನತ್ ಖಾತೆ | 7,82,803.00 | |
| 1,37,11,382.00 | ಸಂಡ್ರಿ ಬಾಬ್ತುಗಳು | 1,37,69,539.00 | |
| 45,83,500.00 | ಲಾಕರ್ ಠೇವಣಿಗಳು | 46,21,500.00 | |
| **816,75,73,146.30** | **ಮುಂದುವರೆದಿದೆ** | | **836,28,42,079.82** |

# ಬ್ಯಾಂಕ್ ಲಿ., ದಾವಣಗೆರೆ

## ಆಢಾವೆ ಪತ್ರಿಕೆ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 523,57,43,194.71 | ಹಿಂದಿನಿಂದ ಬಂದದ್ದು | | 523,03,85,089.51 |
| 268,87,60,455.89 | **ಸಾಲಗಳು** | | 288,92,05,679.16 |
| 142,14,50,140.60 | ಅಲ್ಪಾವಧಿ ಸಾಲಗಳು, ಕ್ಯಾಶ್ ಕ್ರೆಡಿಟ್, ಓವರ್ ಡ್ರಾಫ್ಟ್, ಬಿಲ್ಸ್ ಡಿಸ್ಕೌಂಟ್ಸ್ | 124,64,77,941.75 | |
| 142,13,43,352.80 | ವಾಸ್ತವಿಕ ಭದ್ರತೆಗಳ ಮೇಲೆ | 124,63,71,153.95 | |
| 142,14,50,140.60 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 124,64,77,941.75 | |
| 6,83,53,430.80 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 6,18,12,645.80 | |
| 45,155.80 | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | 45,155.80 | |
| 51,76,41,073.29 | **ಮಧ್ಯಮಾವಧಿ ಸಾಲಗಳು** | 58,87,20,748.55 | |
| 35,42,44,948.00 | ವಾಸ್ತವಿಕ ಭದ್ರತೆಗಳ ಮೇಲೆ | 44,35,89,044.55 | |
| 51,76,41,073.29 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 58,87,20,748.55 | |
| 3,83,37,703.46 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 3,25,87,891.00 | |
| -- | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | -- | |
| 74,96,69,242.00 | **ದೀರ್ಘಾವಧಿ ಸಾಲಗಳು** | 105,40,06,988.86 | |
| 74,96,69,242.00 | ವಾಸ್ತವಿಕ ಭದ್ರತೆಗಳ ಮೇಲೆ | 105,40,06,988.86 | |
| 74,96,69,242.00 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 105,40,06,988.86 | |
| 6,49,04,568.00 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 7,08,52,912.54 | |
| -- | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | -- | |
| **792,45,03,650.60** | **ಮುಂದುವರೆದಿದೆ** | | **811,95,90,768.67** |

## ಬಾಪೂಜಿ ಕೋ-ಆಪರೇಟಿವ್

### ದಿನಾಂಕ 31-03-2021ರ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 816,75,73,146.30 | ಹಿಂದಿನಿಂದ ಬಂದದ್ದು | | 836,28,42,079.82 |
| 4,52,81,623.48 | **ಲಾಭ ಮತ್ತು ನಷ್ಟ ಖಾತೆ** | | 5,97,41,858.48 |
| | ಕಳೆದ ವರ್ಷದ ಲಾಭ | 4,52,81,623.48 | |
| | ವಿನಿಯೋಗಿಸಿದ್ದು | 4,56,81,623.48 | |
| | ಈ ಸಾಲಿನ ನಿವ್ವಳ ಲಾಭ (ಲಾಭ-ನಷ್ಟ ಖಾತೆಯಿಂದ) | 5,97,41,858.48 | |
| 1,09,23,700.00 | **ನಾನ್ ಬ್ಯಾಂಕಿಂಗ್ ಅಸೆಟ್** | | 1,09,23,700.00 |
| 18,02,661.00 | **ಘಟನಾಪೇಕ್ಷ ಭಾದ್ಯತೆಗಳು ಬ್ಯಾಂಕ್ ಗ್ಯಾರಂಟಿಗಳನ್ನು ನೀಡಿರುವುದು** | 2,31,58,831.00 | |
| 95,39,448.29 | ಆರ್.ಬಿ.ಐ.ನ ಡೆಫ್ ಖಾತೆಯಲ್ಲಿ | 1,51,14,993.91 | |
| **822,37,78,469.78** | **ಜುಮ್ಲಾ** | | **843,35,07,638.30** |

BAPUJI CO-OPERATIVE BANK LIMITED * DAVANGERE * BCB LTD

# ಬ್ಯಾಂಕ್ ಲಿ., ದಾವಣಗೆರೆ

## ಆಢಾವೆ ಪತ್ರಿಕೆ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 792,45,03,650.60 | ಹಿಂದಿನಿಂದ ಬಂದದ್ದು | | 811,95,90,768.67 |
| 24,06,34,024.29 | ಬರಬೇಕಾಗಿರುವ ಬಡ್ಡಿ | | 26,67,79,948.07 |
| 4,35,06,608.99 | (1) ಸಂಚಯಗಳ ಮೇಲೆ | 3,73,83,779.25 | |
| 19,71,27,415.30 | (2) ಕಟ್ ಬಾಕಿ ಸಾಲಗಳ ಮೇಲಿನ ಬಡ್ಡಿ (ಎದುರುತೋರಿಸಿದಂತೆ) | 22,93,96,168.82 | |
| 47,45,200.32 | ಪೀಠೋಪಕರಣಗಳು | | 44,51,721.52 |
| 1,41,12,924.47 | ಸ್ಥಿರ ಆಸ್ತಿಗಳು | | 1,34,07,278.94 |
| 2,40,16,315.10 | ಇತರೆ ಆಸ್ತಿಗಳು | | 1,35,11,566.10 |
| 9,94,296.00 | 1) ಗಣಕ ಯಂತ್ರಗಳು | 6,08,010.00 | |
| 5,32,194.10 | 2) ಮುಂಗಡಗಳು | 5,03,004.10 | |
| 3,36,000.00 | 3) ಹಬ್ಬದ ಮುಂಗಡಗಳು | 3,21,000.00 | |
| 14,28,543.00 | 4) ವಾಹನ | 10,71,407.00 | |
| 1,84,09,213.00 | 5) ಆದಾಯ ತೆರಿಗೆ ಮುಂಗಡ | 84,39,379.00 | |
| 13,95,116.00 | 6) ಕಂಪ್ಯೂಟರ್ ಸಾಫ್ಟ್‌ವೇರ್ | 8,77,116.00 | |
| 1,90,646.00 | 7) ಇ-ಸ್ಟಾಂಪಿಂಗ್ | 2,15,025.00 | |
| 7,30,307.00 | 8) ಎ.ಟಿ.ಎಂ. ಕಾರ್ಡ್ ಅಕೌಂಟ್ | 5,69,207.00 | |
| | 9) ಜಿ.ಓ.ಐ. ನಿಂದ ಬರಬೇಕಾಗಿರುವ ಚಕ್ರಬಡ್ಡಿ | 9,07,418.00 | |
| 1,57,66,355.00 | ನಾನ್ ಬ್ಯಾಂಕಿಂಗ್ ಅಸೆಟ್ | | 1,57,66,355.00 |
| 822,37,78,469.78 | ಜುಮ್ಲಾ | | 843,35,07,638.30 |

BAPUJI CO-OPERATIVE BANK LIMITED * DAVANGERE * BCB LTD

## ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳು :

i & ii) ದಿನಾಂಕ 31-03-2021ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡಾ 24.00 ರಷ್ಟು ಇರುವುದು. ಈ ಪ್ರಮಾಣವು ಕಳೆದ ಸಾಲಿನ ವರ್ಷಾಂತ್ಯಕ್ಕೆ ಶೇಕಡಾ 27.9 ರಷ್ಟು ಇದ್ದು ಈ ಸಾಲಿನಲ್ಲಿ ಶೇಕಡಾ 3.9 ರಷ್ಟು ಕಡಿಮೆಯಾಗಿರುತ್ತದೆ.

iii) ಹೂಡಿಕೆಗಳು

ಅ) ಪುಸ್ತಕ ಬೆಲೆ ಮತ್ತು ಮುಖ ಬೆಲೆಗಳನ್ನು
ಆ) ಮಾರುಕಟ್ಟೆಯ ಬೆಲೆಗಳನ್ನು } ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.

ಇ) Details of Issuer composition of Non-SLR Investments and non performing Non-SLR Investments.

| No. | Issuer | Amount | Extent of 'below investment grade Securities' | Extent 'Unrated Securities' | Extent of 'Unlisted Securities' |
|---|---|---|---|---|---|
| (1) | (2) | (3) | (4) | (5) | (6) |
| 1 | PSUs | | | | |
| 2 | Fis | | | | |
| 3 | Public Sector Banks | | | | |
| 4 | Mutual Funds | 4600.00 | | 4600.00 | |
| 5 | Others | 1.01 | | 1.01 | |
| 6 | Provision Held towards Depreciation | 356.05 | | | |

iv) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್, ಹೌಸಿಂಗ್ ಸಾಲ ರೂ. 6,695.14 ಲಕ್ಷ ಇರುತ್ತದೆ.

v) ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.

vi) ಅ) ಈ ಸಾಲಿನಲ್ಲಿ ನಿರ್ದೇಶಕ ಮಂಡಲಿಯ ಸದಸ್ಯರಿಂದ ಮತ್ತು ಅವರ ಹತ್ತಿರದ ಸಂಬಂಧಿಗಳಿಂದ ಭದ್ರತಾ ಆಧಾರಗಳ ಮೇಲೆ ದಿನಾಂಕ 31-03-2021ಕ್ಕೆ ಯಾವ ಸಾಲವೂ ಇರುವುದಿಲ್ಲ.

ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.

vii) 2020-21 ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ವೆಚ್ಚವು (Cost of Deposit) ಶೇಕಡಾ 6.25 ರಷ್ಟು ಇದೆ.

viii & ix) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಹಿಂದಿನ ಸಾಲಿನ ಅನುತ್ಪಾದಿಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| ದಿನಾಂಕ | ಮೊಬಲಗು | ಒಟ್ಟು ಸಾಲಗಳಿಗೆ ಶೇಕಡವಾರು | ಮೊಬಲಗು | ಶೇಕಡವಾರು |
| 31-03-2020 | 2639.05 | 9.82 | 0.00 | 0.00 |
| 31-03-2021 | 2697.75 | 9.34 | 0.00 | 0.00 |
| ವ್ಯತ್ಯಾಸ | 58.70 | 0.48 | - | - |

| ಜಿ. ವಿ. ಶಿವಶಂಕರ್ | ಡಾ. ಎಂ. ಜಿ. ಈಶ್ವರಪ್ಪ | ಎ. ಎಸ್. ವೀರಣ್ಣ |
|---|---|---|
| ಪ್ರಧಾನ ವ್ಯವಸ್ಥಾಪಕರು | ನಿರ್ದೇಶಕರು | ನಿರ್ದೇಶಕರು |

## "ಲೆಕ್ಕ ಪರಿಶೋಧಕರ

ನಾವು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಎಂಟು ಶಾಖೆಗಳ ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನಮ್ಮ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸ್ಥಳ : ದಾವಣಗೆರೆ
ದಿನಾಂಕ : 30-08-2021

x) 2020-2021ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿರುತ್ತದೆ. ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 7.42 ಇರುತ್ತದೆ. ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 0.46 ಇರುತ್ತದೆ. ಬ್ಯಾಂಕಿನ ಲಾಭವು ದುಡಿಯುವ ಬಂಡವಾಳದ ಮೇಲೆ ಶೇಕಡಾ 1.45 ಇರುತ್ತದೆ. ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 0.73 ಇರುತ್ತದೆ. ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. 932.40 ಲಕ್ಷ ಇರುತ್ತದೆ. ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 5.69 ಲಕ್ಷ ಇರುತ್ತದೆ.

xi & xii) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗುಗಳನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಗುಂತಾಯಗಳ ಸವಕಳಿ ನಿಧಿ | ಪ್ರಮಾಣಿಕ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ |
|---|---|---|---|
| 31-03-2020 | 3031.43 | 351.05 | 87.43 |
| 31-03-2021 | 3093.17 | 356.05 | 127.43 |
| ವ್ಯತ್ಯಾಸ | 61.74 | 5.00 | 40.00 |

xiii) ವಿದೇಶಿ ವಿನಿಮಯದ ಆಸ್ತಿ ಮತ್ತು ಜವಾಬ್ದಾರಿಗಳು: ಅನ್ವಯಿಸುವುದಿಲ್ಲ.

xiv) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು ದಿನಾಂಕ 20-05-2020 ಮತ್ತು 27-11-2020 ರಂದು ಒಟ್ಟು ರೂ. 94,58,466.52 ಪೈಸೆ ಡಿಪಾಜಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.

xv) ರಿಜರ್ವ್ ಬ್ಯಾಂಕಿನ ಯಾವುದೇ ದಂಡನಾರ್ಹನೆಗೆ ಗುರಿಯಾಗಿರುವುದಿಲ್ಲ.

xvi) ಪುನರ್ರಚಿಸಲಾದ ಸಾಲದ ಖಾತೆಗಳು ಇರುವುದಿಲ್ಲ.

xvii) ಸ್ಥಿರಾಸ್ತಿಗಳ ಮೌಲ್ಯಾಂಕನ / ಪುನರ್ ಮೌಲ್ಯಾಂಕನ : ಇರುವುದಿಲ್ಲ

xviii)

| ಡೆಫ್ ಖಾತೆ : | ಹಿಂದಿನ ವರ್ಷ | ಪ್ರಸಕ್ತ ವರ್ಷ |
|---|---|---|
| ವರ್ಗಾವಣೆ ಮಾಡಿದ ಪ್ರಾರಂಭಿಕ ಮೊತ್ತ | 79,99,548.23 | 95,39,448.29 |
| + ಪ್ರಸಕ್ತ ವರ್ಷದಲ್ಲಿ ವರ್ಗಾವಣೆ ಮಾಡಿದ ಮೊತ್ತ | 15,39,900.06 | 55,75,545.62 |
| ಕೋರಿಕೆ ಮೇರೆಗೆ ವಾಪಾಸ್ಸು ಜಮಾ ಮಾಡಿದ ಮೊತ್ತ | -- | -- |
| ವರ್ಗಾಯಿಸಿದ ಅಂತಿಮ ಮೊತ್ತ | 95,39,448.29 | 1,51,14,993.91 |

**ಎಸ್. ಎಸ್. ಮಲ್ಲಿಕಾರ್ಜುನ್,** ಉಪಾಧ್ಯಕ್ಷರು
ಮಾಜಿ ಸಚಿವರು

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

**ಪ್ರಮಾಣ ಪತ್ರ"**

(ಕ್ರೂಢೀಕೃತ) 2020-2021ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಮತ್ತು ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ 31-03-2021ಕ್ಕೆ ಇದ್ದಂತೆ ನಮ್ಮ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು 'ಪರಿಶೀಲಿಸಿದೆ'

**ಹುರಕಡ್ಲಿ ಅಂಡ್ ಕೋ ಪರವಾಗಿ,**
ಚಾರ್ಟರ್ಡ್ ಅಕೌಂಟೆಂಟ್ಸ್, ICAI FRN : 013077S
**(ಎಸ್. ಎಸ್. ಹುರಕಡ್ಲಿ)** ಪ್ರೊಪ್ರೈಟರ್ ಮೆಂಬರ್‌ಶಿಪ್ ನಂ. 032400

# ಬಾಪೂಜಿ ಕೋ-ಆಪರೇಟಿವ್

## ದಿನಾಂಕ 31-03-2021ರ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಖರ್ಚು | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 38,61,69,537.00 | ಠೇವಣಿಗಳು ಮತ್ತು ಸಾಲಗಳ ಮೇಲೆ ಕೊಟ್ಟ ಬಡ್ಡಿ | 69,78,40,212.00 | 40,41,58,736.00 |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 29,36,81,476.00 | |
| 8,16,05,240.52 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಸಿಬ್ಬಂದಿ ಗ್ರಾಚ್ಯುಟಿ | | 8,03,04,035.89 |
| 4,05,000.00 | ಆಡಳಿತ ಮಂಡಲಿ ಸದಸ್ಯರುಗಳ ಮತ್ತು ಸ್ಥಳೀಯ ಸಮಿತಿಗಳ ಸದಸ್ಯರ ಫೀ ಮತ್ತು ಭತ್ಯೆಗಳು | | 3,99,000.-00 |
| 98,02,125.27 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 1,17,67,912.52 |
| 1,09,34,596.00 | ಬೋನಸ್ ಮತ್ತು ಎಕ್ಸ್‌ಗ್ರೇಷಿಯ ಸಿಬ್ಬಂದಿಗೆ | | 1,09,20,251.00 |
| 5,04,968.00 | ಅಂಚೆ ಮತ್ತು ತಂತಿ ದೂರವಾಣಿ ಖರ್ಚು | | 2,09,355.00 |
| 1,05,310.00 | ಕಾನೂನು ಖರ್ಚುಗಳು | | 30,000.00 |
| 22,45,146.00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ವೆಚ್ಚ | | 21,70,110.00 |
| 1,16,19,861.35 | ಅಸ್ತಿಗಳ ಮೇಲಿನ ಸವಕಳಿ ಮತ್ತು ದುರಸ್ತಿ ಖರ್ಚು | | 1,02,41,429.28 |
| 9,24,106.16 | ಮುದ್ರಣ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರ | | 9,64,218.00 |
| 58,27,731.00 | ಕರಡು ಸಾಲಗಳ ನಿಧಿಗೆ | | 1,01,74,218.00 |
| 13,41,270.00 | ಕರಡು ಸಾಲಗಳ ವಿಶೇಷ ನಿಧಿಗೆ | | 29,91,620.00 |
| 2,46,43,934.00 | ಆದಾಯ ತೆರಿಗೆಯ ಬಾಬ್ತು | | 3,74,30,233.00 |
| -- | ಹಿಂದಿನ ವರ್ಷದ ಆದಾಯ ತೆರಿಗೆ ಪಾವತಿಸಿದ ಮೊತ್ತ | | 89,16,460.00 |
| 52,83,999.00 | ಇತರೆ ಖರ್ಚುಗಳು | | 53,57,209.00 |
| -- | ದೇಣಿಗೆ (ಡೊನೇಷನ್) | | 1,80,000.00 |
| 4,52,81,623.48 | ನಿವ್ವಳ ಲಾಭ | | 5,97,41,858.48 |
| **58,66,94,447.78** | **ಜುಮ್ಲಾ** | | **64,59,56,646.17** |

| ಜಿ. ವಿ. ಶಿವಶಂಕರ್ | ಡಾ. ಎಂ. ಜಿ. ಈಶ್ವರಪ್ಪ | ಎ. ಎಸ್.ವೀರಣ್ಣ |
|---|---|---|
| ಪ್ರಧಾನ ವ್ಯವಸ್ಥಾಪಕರು | ನಿರ್ದೇಶಕರು | ನಿರ್ದೇಶಕರು |

ಸ್ಥಳ : ದಾವಣಗೆರೆ
ದಿನಾಂಕ : 30-08-2021

# ಬ್ಯಾಂಕ್ ಲಿ., ದಾವಣಗೆರೆ

## ಲಾಭ - ನಷ್ಟ ಪತ್ರಿಕೆ

| 31-03-2020ರಲ್ಲಿ ಇದ್ದಂತೆ ರೂ. ಪೈ. | ಆದಾಯ | | 31-03-2021ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 23,10,11,690.62 | ಬಡ್ಡಿ ಮತ್ತು ಸೋಡಿ | 54,69,57,419.29 | 25,32,75,943.29 |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 29,36,81,476.00 | |
| 14,74,926.18 | ದಲ್ಲಾಳಿ, ವಿನಿಮಯ ಮತ್ತು ರುಸುಂ (ವಿನಾಯಿತಿ ಮತ್ತು ಧರ್ಮದಿಂದ / ಬ್ಯಾಂಕೇತರ ಆಸ್ತಿ ಮಾರಾಟದಿಂದ ಬಂದ ಆದಾಯ) | | 13,24,909.74 |
| 35,42,07,830.98 | ಇತರೆ ಜಮಾಗಳು | | 39,13,55,793.14 |
| 33,92,07,990.00 | ಸಂಚಯಗಳ ಮೇಲಿನ ಆದಾಯ | 35,51,64,610.55 | |
| 48,69,590.98 | ಇತರೆ ಜಮಾಗಳು | 39,33,750.09 | |
| 13,77,750.00 | ಲಾಕರ್ ಬಾಡಿಗೆ | 14,58,750.00 | |
| 87,52,500.00 | ಸೆಕ್ಯೂರಿಟಿಗಳ ಮಾರಾಟದಿಂದ ಬಂದ ಲಾಭ | 3,07,98,682.50 | |
| **58,66,94,447.78** | **ಜುಮ್ಲಾ** | | **64,59,56,646.17** |

**ಎಸ್. ಎಸ್. ಮಲ್ಲಿಕಾರ್ಜುನ್,** ಉಪಾಧ್ಯಕ್ಷರು
ಮಾಜಿ ಸಚಿವರು

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

'ಪರಿಶೀಲಿಸಿದೆ'
**ಹುರಕಡ್ಲಿ ಅಂಡ್ ಕೋ ಪರವಾಗಿ,**
ಚಾರ್ಟರ್ಡ್ ಅಕೌಂಟೆಂಟ್ಸ್, ICAI FRN : 013077S
**(ಎಸ್. ಎಸ್. ಹುರಕಡ್ಲಿ)** ಪ್ರೊಪ್ರೈಟರ್ ಮೆಂಬರ್‌ಶಿಪ್ ನಂ. 032400

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ 2020-2021ನೇ ಸಾಲಿಗೆ ಮಂಜೂರಾದ ಆಯ-ವ್ಯಯ 2021-2022ರ ಅಂದಾಜು

| ಕ್ರ. ಸಂ. | ವಿವರಗಳು | 2020-2021ರ ಮಂಜೂರಾದ ಬಡ್ಜೆಟ್ | 2020-2021ಕ್ಕೆ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2021-2022ರ ಅಂದಾಜು ಖರ್ಚು | 2021-2022ರ ಅಂದಾಜು ಆದಾಯ |
|---|---|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 39,00,00,000-00 | 40,41,58,736-00 | 1,41,58,736-00 | 40,00,00,000-00 | |
| 2 | ಸಿಬ್ಬಂದಿ ಸಂಬಳ, ಭವಿಷ್ಯನಿಧಿ ಮತ್ತು ಗ್ರಾಚ್ಯುಟಿ ಪ್ರೀಮಿಯಂ | 9,00,00,000-00 | 8,03,04,035-89 | | 9,50,00,000-00 | |
| 3 | ನಿರ್ದೇಶಕರ ಸಭೆಯ ಭತ್ಯೆ | 8,00,000-00 | 3,99,000-00 | | 8,00,000-00 | |
| 4 | ಬಾಡಿಗೆ, ವಿದ್ಯುಚ್ಛಕ್ತಿ, ವಿಮೆ, ಟ್ಯಾಕ್ಸ್ | 1,25,00,000-00 | 1,15,01,999-52 | | 1,40,00,000-00 | |
| 5 | ಅಂಚೆ ಮತ್ತು ದೂರವಾಣಿ | 6,00,000-00 | 2,09,355-00 | | 6,00,000-00 | |
| 6 | ಮುದ್ರಣ ಮತ್ತು ಕಂಪ್ಯೂಟರ್ ಸ್ಟೇಷನರಿ | 15,00,000-00 | 8,48,338-00 | | 15,00,000-00 | |
| 7 | ಪ್ರಚಾರ | 4,00,000-00 | 1,15,880-00 | | 4,00,000-00 | |
| 8 | ಚಂದಾ | 3,50,000-00 | 1,51,320-00 | | 3,50,000-00 | |
| 9 | ಲೆಕ್ಕ ಪರಿಶೋಧಕರ ಸಂಭಾವನೆ | 16,00,000-00 | 14,26,655-00 | | 16,00,000-00 | |
| 10 | ಸೇಲ್ ಆಫೀಸರ್ ವೇತನ | 9,50,000-00 | 7,43,455-00 | | 9,50,000-00 | |
| 11 | ಪ್ರವಾಸ ಭತ್ಯೆ | 2,00,000-00 | - | | 2,00,000-00 | |
| 12 | ಮಹಾಸಭೆಯ ಖರ್ಚು | 9,75,000-00 | 5,75,613-00 | | 9,75,000-00 | |
| 13 | ಸವಕಳಿ, ರಿಪೇರಿ, ನವೀಕರಣ ಮತ್ತು ನಿರ್ವಹಣೆ | 1,25,00,000-00 | 89,77,066-33 | | 1,10,00,000-00 | |
| 14 | ಸಿಬ್ಬಂದಿ ತರಬೇತಿ ಖರ್ಚು | 2,00,000-00 | - | | 2,00,000-00 | |
| 15 | ಕಾನೂನು ಖರ್ಚು | 5,00,000-00 | 30,000-00 | | 5,00,000-00 | |
| 16 | ಲಕ್ಷ್ಮೀ ಠೇವಣಿ ಸಂಗ್ರಹಕಾರರ ಕಮೀಷನ್ | 15,00,000-00 | 10,37,421-00 | | 15,00,000-00 | |
| 17 | ಇತರೆ ಖರ್ಚುಗಳು | 45,00,000-00 | 35,92,855-00 | | 50,00,000-00 | |
| 18 | ಎಕ್ಸ್‌ಗ್ರೇಷಿಯಾ | 1,20,00,000-00 | 1,09,20,251-00 | | 1,20,00,000-00 | |
| 19 | ಆದಾಯ ಕರ | 3,10,00,000-00 | 3,74,30,233-00 | 64,30,233-00 | 3,40,00,000-00 | |
| 20 | ಜಿ.ಎಸ್.ಟಿ. | 20,00,000-00 | 2,65,913-00 | | 10,00,000-00 | |
| 21 | ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ | 20,00,000-00 | - | | 30,00,000-00 | |
| 22 | ಸೆಕ್ಯೂರಿಟಿ ಪ್ರೀಮಿಯಂ ಅಮಾರ್ಟೈಸೇಷನ್ | 25,00,000-00 | 12,64,362-95 | | 20,00,000-00 | |
| 23 | ನಿವ್ವಳ ಲಾಭ | 5,11,25,000-00 | 5,97,41,858-48 | | 6,24,25,000-00 | |
| | | ಅಂದಾಜು ಆದಾಯ | ಬಂದದ್ದು | | | |
| 1 | ಸಾಲಗಳ ಮೇಲಿನ ಬಡ್ಡಿ | 24,50,00,000-00 | 25,32,75,943-29 | | | 26,50,00,000-00 |
| 2 | ಗುಂತಾಯಿಸಿದ ಹಣದ ಆದಾಯ | 33,50,00,000-00 | 35,03,10,042-55 | | | 35,00,00,000-00 |
| 3 | ಕಮೀಷನ್ ಮತ್ತು ವಿನಿಮಯ | 25,00,000-00 | 13,24,909-74 | | | 20,00,000-00 |
| 4 | ಇತರೆ | 50,00,000-00 | 39,33,750-09 | | | 50,00,000-00 |
| 5 | ಲಾಕರ್ ಬಾಡಿಗೆ | 22,00,000-00 | 14,58,750-00 | | | 20,00,000-00 |
| 6 | ಸೆಕ್ಯೂರಿಟಿಗಳ ಮಾರಾಟದಿಂದ | 3,00,00,000-00 | 3,07,98,682-50 | | | 2,50,00,000-00 |
| | ಒಟ್ಟು ರೂ. | **61,97,00,000-00** | **64,11,02,078-17** | | **64,90,00,000-00** | **64,90,00,000-00** |

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

## ಪ್ರಗತಿಯ ಪಕ್ಷಿನೋಟ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | 1970 | 1980 | 1990 | 1999-2000 | 2010-11 | 2014-15 | 2015-16 | 2016-17 | 2017-18 | 2018-19 | 2019-20 | 2020-21 |
|---|---|---|---|---|---|---|---|---|---|---|---|---|---|
| 1 | ಸದಸ್ಯರು (ಸಂಖ್ಯೆಗಳಲ್ಲಿ) | 92 | 868 | 2543 | 6433 | 9637 | 10479 | 10511 | 10363 | 10420 | 10154 | 10733 | 10853 |
| 2 | ಷೇರು ಬಂಡವಾಳ | 0.69 | 6.62 | 42.10 | 189.00 | 612.29 | 868.80 | 952.40 | 1030.75 | 1088.34 | 1196.79 | 1265.99 | 1341.25 |
| 3 | ಆಪದ್ಧನ ನಿಧಿ ಮತ್ತು ಇತರೆ ನಿಧಿಗಳು | -- | 17.66 | 218.22 | 2622.79 | 6597.14 | 8203.61 | 8655.12 | 9104.93 | 9441.83 | 9684.93 | 9993.94 | 10571.51 |
| 4 | ಠೇವಣಿಗಳು | 14.75 | 191.40 | 2053.04 | 9943.24 | 25304.16 | 42502.29 | 44890.60 | 50997.46 | 52467.41 | 55889.83 | 68070.65 | 69010.72 |
| 5 | ಸಾಲ ಮತ್ತು ಮುಂಗಡಗಳು | 5.98 | 145.71 | 1405.98 | 8696.97 | 11291.01 | 15713.72 | 16629.54 | 17721.96 | 18973.10 | 21117.00 | 26887.60 | 28892.06 |
| 6 | ಇನ್‌ವೆಸ್ಟ್‌ಮೆಂಟ್ | -- | -- | -- | -- | 19715.47 | 33974.91 | 35357.55 | 40445.09 | 40287.21 | 41873.98 | 42798.21 | 49299.72 |
| 7 | ದುಡಿಯುವ ಬಂಡವಾಳ | 15.48 | 228.55 | 2480.40 | 13463.82 | 33218.26 | 52504.57 | 55305.58 | 61863.65 | 63704.56 | 67567.33 | 80266.51 | 82041.11 |
| 8 | ನಿವ್ವಳ ಲಾಭ | 0.03 | 8.74 | 84.36 | 520.95 | 506.44 | 500.36 | 553.34 | 452.83 | 392.94 | 456.05 | 452.82 | 597.42 |
| 9 | ಲಾಭಾಂಶ | 6.25% | 12% | 12% | 15% | 15% | 18% | 15% | 18% | 18% | 18% | -- | 18%* |
| 10 | ಆಡಿಟ್ ವರ್ಗೀಕರಣ | 'ಬ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' |
| | | | | | | | | | | | | | ★ ಉದ್ದೇಶಿತ |

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**#120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001.**

**ಕೆ.ಸಿ.ಎಸ್. ಕಾಯ್ದೆ 1959, ನಿಯಮಗಳು 1960, ದಿನಾಂಕ : 07-10-2021ರ ಮೇರೆಗೆ ಬ್ಯಾಂಕಿನ ಉಪನಿಬಂಧನೆಗಳಿಗೆ ಸೂಚಿಸಿರುವ ತಿದ್ದುಪಡಿಗಳು**

| ಬೈಲಾ ನಂ. | ಹಾಲಿ ಉಪನಿಬಂಧನೆಗಳು | ಸೂಚಿಸಿರುವ ತಿದ್ದುಪಡಿಗಳು | ತಿದ್ದುಪಡಿಗೆ ಕಾರಣ |
|---|---|---|---|
| 4 | **ಪದಗಳ ಅರ್ಥ ವಿವರಣೆ :**<br>(28) 'ಡೆಲಿಗೇಟ್' ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ. | **ಪದಗಳ ಅರ್ಥ ವಿವರಣೆ :**<br>(28) 'ಡೇಲಿಗೇಟ್' ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಲಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ.' | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960, ದಿನಾಂಕ 07-10-2021ರ ಸೂಕ್ತ ತಿದ್ದುಪಡಿ ಮೇರೆಗೆ |
| 11 | **ಷೇರು ಹಣಕ್ಕಾಗಿ ಅರ್ಜಿ :**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು, ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. | **ಷೇರು ಹಣಕ್ಕಾಗಿ ಅರ್ಜಿ :**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ 2 ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಬಿಟ್ಟು ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | |
| 18 | **ಸದಸ್ಯನ ಕರ್ತವ್ಯಗಳು :**<br>**ಬ್ಯಾಂಕಿನ ಯಾರೇ ಸದಸ್ಯನು -**<br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ. | **ಸದಸ್ಯನ ಕರ್ತವ್ಯಗಳು :**<br>**ಬ್ಯಾಂಕಿನ ಯಾರೇ ಸದಸ್ಯನು -**<br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ. | |

| ಬೈಲಾ ನಂ. | ಹಾಲಿ ಉಪನಿಬಂಧನೆಗಳು | ಸೂಚಿಸಿರುವ ತಿದ್ದುಪಡಿಗಳು | ತಿದ್ದುಪಡಿಗೆ ಕಾರಣ |
|---|---|---|---|
| 19 | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು :**<br>(3) ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಮೂರು ವರ್ಷಗಳ ಅವಧಿಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು :**<br>(3) ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | |
| 47 | **ಮತ ನೀಡಿಕೆ :**<br>(5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ / ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.<br>(ಇ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>(ಎಫ್) ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | **ಮತ ನೀಡಿಕೆ :**<br>(5) ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ / ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.<br>(ಇ) ಯುಕ್ತವಾಗಿ ತಿಳಿಸಲಾದ ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>(ಎಫ್) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | |

| ಬೈಲಾ ನಂ. | ಹಾಲಿ ಉಪನಿಬಂಧನೆಗಳು | ಸೂಚಿಸಿರುವ ತಿದ್ದುಪಡಿಗಳು | ತಿದ್ದುಪಡಿಗೆ ಕಾರಣ |
|---|---|---|---|
| 58 | **ಮಂಡಲಿಯ ತೆರವಾದ ಸ್ಥಾನಗಳು :**<br>(1) ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. | **ಮಂಡಲಿಯ ತೆರವಾದ ಸ್ಥಾನಗಳು :**<br>(1) ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಲಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಲಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | |

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

## ಸಾಲಗಳ ಮೇಲಿನ ಬಡ್ಡಿಯ ದರಗಳು :

| ಕ್ರಮ ಸಂಖ್ಯೆ | ಸಾಲಗಳ ವಿವರ | ಬಡ್ಡಿ ದರ | ನಿಗದಿತ ವೇಳೆಯಲ್ಲಿ ಸಾಲದ ಕಂತು ಮತ್ತು ಬಡ್ಡಿ ಮರುಪಾವತಿಸಿದಲ್ಲಿ ಬಡ್ಡಿಯಲ್ಲಿ ರಿಯಾಯಿತಿ ದರ | ಆಕರಣೆ ಮಾಡುವ ಬಡ್ಡಿ ದರ |
|---|---|---|---|---|
| 1 | ವಸತಿ ಉದ್ದೇಶಕ್ಕೆ ಹೊಸದಾಗಿ ನಿರ್ಮಿಸುವ ಮನೆ, ನಾಲ್ಕು ಚಕ್ರ ವಾಹನಾಧರಿತ ಸಾಲಗಳು (ಸ್ವಂತ ಬಳಕೆಗಾಗಿ) | 13% | - 3% | 10% |
| 2 | ಬಂಗಾರದ ಒಡವೆಗಳ ಮೇಲೆ ನೀಡುವ ಸಾಲ | 10% | -% | 10% |
| 3 | ವೇತನ ಆಧಾರಿತ ಸಾಲಗಳು | 14% | - 3% | 11% |
| 4 | ಸೆಕ್ಯೂರ್ಡ್ ಕ್ಯಾಶ್ ಕ್ರೆಡಿಟ್ (ಮಾರ್ಟ್‌ಗೇಜ್ಡ್, ಸಣ್ಣ ಕೈಗಾರಿಕೆಗಳು, ಹೈಪಾಥಿಕೇಶನ್ ಸಾಲಗಳು) ಕಂತು ಸಾಲಗಳು, ಎಸ್.ಎಸ್.ಐ. ಕಂತು ಸಾಲಗಳು | 14% | - 3% | 11% |
| 5 | ದ್ವಿ ಚಕ್ರ ವಾಹನ, ಹಳೆಯ ವಾಹನ ಸಾಲಗಳು, ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲು ಮತ್ತು ಖಾಲಿ ನಿವೇಶನ ಖರೀದಿಸಲು, ವಾಣಿಜ್ಯ ವಾಹನ, ಕೃಷಿ, ಕಟ್ಟಡ ರಿಪೇರಿ. | 15% | - 3% | 12% |
| 6 | ಆಧಾರ ರಹಿತ ಸಾಲಗಳು, ಕ್ಯಾಶ್ ಕ್ರೆಡಿಟ್, ವೈಯಕ್ತಿಕ ಸಾಲಗಳು, ಗೃಹಪಯೋಗಿ ಸಾಲಗಳು. | 16% | - 3% | 13% |

## ಠೇವಣಿಗಳ ಮೇಲಿನ ಪರಿಷ್ಕೃತ ಬಡ್ಡಿಯ ದರಗಳು :

| ಕ್ರ. ಸಂಖ್ಯೆ | ವಿವರಗಳು | ರೆಗ್ಯೂಲರ್ | ಹಿರಿಯ ನಾಗರೀಕರಿಗೆ |
|---|---|---|---|
| 1 | 15 ದಿನಗಳಿಂದ 90 ದಿನಗಳವರೆಗೆ | 3.50% | 3.50% |
| 2 | 91 ದಿನಗಳಿಂದ 180 ದಿನಗಳವರೆಗೆ | 4.50% | 4.50% |
| 3 | 181 ದಿನಗಳಿಂದ 1 ವರ್ಷದವರೆಗೆ | 5.50% | 5.50% |
| 4 | 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 6.50% | 7.00% |
| 5 | 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 6.75% | 7.25% |
| 6 | 3 ವರ್ಷಗಳ ಮೇಲ್ಪಟ್ಟು | 6.50% | 7.00% |

**ಸೂಚನೆ :**

1. ಉಳಿತಾಯ ಖಾತೆಗೆ ವಾರ್ಷಿಕ ಶೇಕಡ 3.00%
2. ಒಂದು ವರ್ಷದ ಮೇಲ್ಪಟ್ಟ ಠೇವಣಿ ಮೊತ್ತ ರೂ. 25.00 ಲಕ್ಷಕ್ಕೂ ಮೀರಿದರೆ (ಒಂದೇ ಖಾತೆಯಲ್ಲಿ) 0.50% ಹೆಚ್ಚಿಗೆ ಬಡ್ಡಿ ನೀಡಲಾಗುವುದು. ಹಿರಿಯ ನಾಗರೀಕರಿಗೆ ಸಿಗುವ ಹೆಚ್ಚಿಗೆ ಬಡ್ಡಿ ದರ ಈ ಖಾತೆಗಳಿಗೆ ಅನ್ವಯಿಸುವುದಿಲ್ಲ.

## ಜಾಮೀನುದಾರರ ಜವಾಬ್ದಾರಿ ಮತ್ತು ಕರ್ತವ್ಯಗಳು

1. ಪ್ರತಿಯೊಬ್ಬ ಜಾಮೀನುದಾರನು ಸಾಲಗಾರನಷ್ಟೇ ಸಾಲದ ಮರುಪಾವತಿಗೆ ಜವಾಬ್ದಾರನಾಗಿರುತ್ತಾನೆ.
2. ಜಾಮೀನು ಕೊಡುವ ಮೊದಲು ಸಾಲಗಾರನ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಮತ್ತು ಸಾಲದ ಕಂತುಗಳನ್ನು ಪಾವತಿಸುವ ಸಾಮರ್ಥ್ಯದ ಬಗ್ಗೆ ತಿಳಿದುಕೊಂಡಿರಬೇಕು.
3. ಕಾಲ ಕಾಲಕ್ಕೆ ಸಾಲಗಾರನು ಕಂತುಗಳನ್ನು ಭರ್ತಿ ಮಾಡಿರುವರೋ ಹೇಗೆ ಎಂಬುದನ್ನು ವಿಚಾರಿಸಬೇಕು.
4. ಬ್ಯಾಂಕಿನ ಆಡಳಿತ ಮತ್ತು ಜಾಮೀನುದಾರನ ಹಾಗೂ ಸಾಲಗಾರನ ಸಹಕಾರದಿಂದ ಈ ಕೆಲಸ ನಿರಂತರ ನಡೆಯಬೇಕಾದುದು. ಎಲ್ಲರ-ಹಿತವೂ ಇದರಲ್ಲಿ ಅಡಗಿದೆ. ಈ ಮಾರ್ಗದಲ್ಲಿ ಎಲ್ಲರೂ ಸದಾಕಾಲ ಕಾರ್ಯೋನ್ಮುಖರಾಗಿರಬೇಕು.
5. ಸದಸ್ಯರು ತಾವು ಪಡೆದ ಸಾಲದ ಕಂತುಗಳನ್ನು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು ಜಮಾ ಮಾಡಬೇಕು.
6. ಬ್ಯಾಂಕಿನ ಸಾಲಗಾರರು ಕಟ್-ಬಾಕಿದಾರರಾದರೆ ಅವರ ಜಾಮೀನುದಾರರಿಗೂ ಸಾಲ ಪಡೆಯಲು ಹಕ್ಕು ಇರುವುದಿಲ್ಲ. ಆದುದರಿಂದ ಜಾಮೀನುದಾರರಾಗುವವರು ಮುಂಚಿತವಾಗಿ ಮೇಲಿನ ಅಂಶಗಳನ್ನು ಗಮನದಲ್ಲಿರಿಸಬೇಕು.

## ಸದಸ್ಯರ ಗಮನಕ್ಕೆ

1. ಹಿಂದಿನ ಸಾಲುಗಳ ಡಿವಿಡೆಂಡ್ ಪಡೆಯದೇ ಇರುವ ಸದಸ್ಯರುಗಳು ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡ್ ಪಡೆಯಲು ವಿನಂತಿಸಲಾಗಿದೆ. ಇಲ್ಲವಾದಲ್ಲಿ ಉಪವಿಧಿಗಳನ್ವಯ 3 ವರ್ಷ ಗತಿಸಿದ ಡಿವಿಡೆಂಡ್ ಹಣವನ್ನು ಬ್ಯಾಂಕಿನ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
2. ಷೇರುದಾರರು ತಮ್ಮ ಇತ್ತೀಚಿನ ವಿಳಾಸವನ್ನು ಬ್ಯಾಂಕಿಗೆ ತಪ್ಪದೇ ತಿಳಿಸಬೇಕು.
3. ಸದಸ್ಯರು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಮೂರು ಭಾವಚಿತ್ರಗಳನ್ನು (ಫೋಟೋ) ಸಲ್ಲಿಸಿ ಸದಸ್ಯತ್ವದ ಗುರುತಿನ ಪತ್ರ (Identity Card) ಪಡೆಯಬೇಕು. ಇದು ಕಡ್ಡಾಯವಾಗಿರುತ್ತದೆ.
4. ತಿದ್ದುಪಡಿಯಾದ ಸಹಕಾರ ಸಂಘಗಳ ಕಾಯ್ದೆ ಮತ್ತು ಬ್ಯಾಂಕಿನ ಉಪವಿಧಿಗಳನ್ವಯ ಪ್ರತಿ ಸದಸ್ಯರು ಕನಿಷ್ಠ ರೂ. 1000/- ಗಳ ಷೇರು ಹಣ ಮತ್ತು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಠ 5 ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವುದರ ಜೊತೆಗೆ ಕನಿಷ್ಠ ರೂ. 5,000/- ಗಳ ಠೇವಣಿ ಕಡ್ಡಾಯವಾಗಿರುತ್ತದೆ. ಪ್ರಯುಕ್ತ ಪ್ರತಿ ಸದಸ್ಯನು ಕನಿಷ್ಠ ಸೇವಾ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 3 ವಾರ್ಷಿಕ ಮಹಾಸಭೆಗಳಿಗೆ ಹಾಜರಾಗುವ ಮೂಲಕ ಬ್ಯಾಂಕಿನ ಅರ್ಹ ಸದಸ್ಯರಾಗಿ ಮುಂದುವರೆಯಬೇಕೆಂದು ವಿನಂತಿಸಲಾಗಿದೆ.
5. ಸದಸ್ಯರು ತಾವು ಪಡೆದ ಸಾಲದ ಕಂತುಗಳನ್ನು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು ಜಮಾ ಮಾಡಬೇಕು.
6. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸದಸ್ಯರಾದವರಿಗೆ ಅವಧಿ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿಯಲ್ಲಿ ಬ್ಯಾಂಕುಗಳು ಮೂಲದಲ್ಲಿಯೇ ಆದಾಯ ಕರ ಕಡಿತಗೊಳಿಸಲು ಇದ್ದ ವಿನಾಯಿತಿ ಈಗ ರದ್ದಾಗಿದ್ದು ವರ್ಷಕ್ಕೆ ರೂ. 40,000/- ಮತ್ತು ಹಿರಿಯ ನಾಗರೀಕರಿಗೆ ರೂ. 50,000-00 (ಏಪ್ರಿಲ್‌ನಿಂದ ಮಾರ್ಚ್‌ವರೆಗೆ) ಕ್ಕಿಂತ ಹೆಚ್ಚು ಬಡ್ಡಿ ಬಂದರೆ ಶೇಕಡಾ 10 ರಂತೆ ಪಾನ್ ಕಾರ್ಡ್ ಕೊಟ್ಟವರಿಗೆ (ಪಾನ್ ಕಾರ್ಡ್ ಕೊಡದಿದ್ದರೆ ಶೇಕಡಾ 20 ರಂತೆ) ಕಡಿತಗೊಳಿಸಿ ಆದಾಯ ಕರ ಕಛೇರಿಗೆ ಜಮಾ ಮಾಡಬೇಕಾಗುತ್ತದೆ. ಈ ಟಿ.ಡಿ.ಎಸ್. ಕಾನೂನು 2015 ರ ಜೂನ್ ಒಂದನೇ ತಾರೀಖಿನಿಂದ ಜಾರಿಯಲ್ಲಿ ಬಂದಿದೆ. ತಾವು ಆದಾಯಕರ ವ್ಯಾಪ್ತಿಗೆ ಬಾರದೇ ಇದ್ದಲ್ಲಿ ಫಾರಂ ನಂ. 15ಜಿ ಇಲ್ಲವೇ 15ಹೆಚ್ ಹೊಸ ನಮೂನೆ ಕಡ್ಡಾಯವಾಗಿ ಮುಂಗಡವಾಗಿ ಕೊಡಬೇಕಾಗುತ್ತದೆ.

**ಸದಸ್ಯರು ಈ ವೆಬ್‌ಸೈಟ್ ಲಿಂಕ್ ಮೂಲಕ https://youtu.be/i8icQESiuaU**
**ವರ್ಚ್ಯುಯಲ್ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ.**

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

## ನಿರ್ದೇಶಕ ಮಂಡಲಿ ಸದಸ್ಯರು



ಡಾ. ಶಾಮನೂರು ಶಿವಶಂಕರಪ್ಪನವರು
ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು



ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್
ಉಪಾಧ್ಯಕ್ಷರು
ಮಾಜಿ ಸಚಿವರು



ಶ್ರೀ ಎ.ಎಸ್. ವೀರಣ್ಣ
ನಿರ್ದೇಶಕರು



ಡಾ. ಎಂ.ಜಿ. ಈಶ್ವರಪ್ಪ
ನಿರ್ದೇಶಕರು



ಡಾ. ಬಿ.ಎಸ್. ರೆಡ್ಡಿ
ನಿರ್ದೇಶಕರು



ಡಾ. ಶಂಷದ್ ಬೇಗಂ
ನಿರ್ದೇಶಕರು



ಡಾ|| ಪಿ. ಶಶಿಕಲಾ
ನಿರ್ದೇಶಕರು



ಡಾ. ಬಿ. ಪೂರ್ಣಿಮಾ
ನಿರ್ದೇಶಕರು



ಡಾ. ಕೆ. ಹನುಮಂತಪ್ಪ
ನಿರ್ದೇಶಕರು



ಡಾ. ಹೆಚ್. ಶಿವಪ್ಪ
ನಿರ್ದೇಶಕರು



ಡಾ|| ಎ. ಅರುಣ್‌ಕುಮಾರ್
ನಿರ್ದೇಶಕರು



ಡಾ|| ಸಿ.ವೈ. ಸುದರ್ಶನ್
ನಿರ್ದೇಶಕರು



ಡಾ|| ಎಂ.ಎಂ. ಲಿಂಗರಾಜ
ನಿರ್ದೇಶಕರು



ಶ್ರೀ ಕೆ. ಬೊಮ್ಮಣ್ಣ
ನಿರ್ದೇಶಕರು



ಶ್ರೀ ಕೆ.ಎಸ್. ವೀರೇಶ್
ನಿರ್ದೇಶಕರು



ಶ್ರೀ ಜಿ.ವಿ. ಶಿವಶಂಕರ್
ಪ್ರಧಾನ ವ್ಯವಸ್ಥಾಪಕರು

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

BAPUJI CO-OPERATIVE BANK LIMITED
BCB LTD
DAVANGERE

## ಶಾಖಾ ವ್ಯವಸ್ಥಾಪಕರುಗಳು



ಶ್ರೀ ಜಿ. ಓ. ಶಂಕರಪ್ಪ
ಕೆ.ಆರ್. ಮಾರ್ಕೆಟ್ ಶಾಖೆ



ಶ್ರೀ ಬಿ. ಜಿ. ಬಸವರಾಜಪ್ಪ
ಹೆಚ್. ಎಂ. ರಸ್ತೆ ಶಾಖೆ



ಶ್ರೀ ಎಂ. ಬಸವರಾಜ್
ಆಡಳಿತ ಕಛೇರಿ



ಶ್ರೀಮತಿ ಶೋಭಾ ಪಾಟೀಲ್
ಜೆ.ಜೆ.ಎಂ.ಎಂ.ಸಿ. ಶಾಖೆ



ಶ್ರೀ ಕೆ. ಎಂ. ಲಿಂಗೇಶಿ
ಪಿ.ಜೆ. ಬಡಾವಣೆ ಶಾಖೆ



ಶ್ರೀ ಡಿ. ಜಿ. ರವಿಶಂಕರ್
ಆರ್.ಎಂ.ಸಿ. ಶಾಖೆ



ಶ್ರೀ ಜಿ.ಬಿ. ಮಂಜುನಾಥ್ ಪಾಟೀಲ್
ಬಿ.ಐ.ಇ.ಟಿ. ಶಾಖೆ



ಶ್ರೀ ಎಂ. ಎಸ್. ಪ್ರಸನ್ನ
ಹದಡಿ ರಸ್ತೆ ಶಾಖೆ



ಶ್ರೀ ಪಿ. ಎಸ್. ರವೀಂದ್ರ
ಎಸ್.ಎಸ್.ಐ.ಎಂ.ಎಸ್. ಶಾಖೆ

## ಬಾಪೂಜಿ ಕೋ- ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ



| ಶಾಖೆಗಳು : | ದೂರವಾಣಿ |
|---|---|
| ಹರ್ಡೇಕರ್ ಮಂಜಪ್ಪ ರಸ್ತೆ | 272803, 272804 |
| ಪಿ. ಜೆ. ಬಡಾವಣೆ | 272800 |
| ಕೆ. ಆರ್. ಮಾರ್ಕೆಟ್ | 272805 |
| ಜೆ. ಜೆ. ಎಂ. ಎಂ. ಸಿ. | 272806, 272807 |
| ಬಿ. ಐ. ಇ. ಟಿ. | 272808 |
| ಹದಡಿ ರಸ್ತೆ | 272809 |
| ಆರ್. ಎಂ. ಸಿ. ಯಾರ್ಡ್ | 272810 |
| ಎಸ್. ಎಸ್. ಐ. ಎಂ. ಎಸ್. & ಆರ್. ಸಿ. | 263277, 266299 |

ತೆರೆದ - ಅಂಚೆ
ಅಂಚೆ ದೃಢೀಕರಣ ಪಡೆದಿದೆ

ಇವರಿಗೆ,


ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

**Bapuji Co-Operative Bank Ltd, Davangere**

ಆಡಳಿತ ಕಛೇರಿ: # 120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ - 577 001.
ದೂರವಾಣಿ: 272802, 276092, 275032 ಫ್ಯಾಕ್ಸ್: 91-8192 - 276329
e-mail : bcb@bcbank.co.in
Website:bapujicoopbank.com


WEAR MASK

KEEP DISTANCE

USE SANITIZER